ಕರ್ನಾಟಕ ವಿಧಾನಸಭೆ

ಶುಕ್ರವಾರ 2ನೇ ಆಗಸ್ಟ್ 2002ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ಅವರು,

ಪೀಠವನ್ನು ಅಲಂಕರಿಸಿದ್ದರು.

ಬೆಂಗಳೂರು ಜಲ ಮಂಡಲಿಯನ್ನು ಖಾಸಗೀಕರಣಗೊಳಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ಹಾಗೂ ಜನತೆಗೆ ಹೆಚ್ಚಿನ ಹೊರೆಯಾಗುವುದರ ಬಗ್ಗೆ

(ಬಿ.ಜೆ.ಪಿ. ಜನತಾದಳ (ಯು) ಮತ್ತು ಜನತಾದಳ (ಎಸ್) ಸದಸ್ಯರಿಂದ ಧರಣಿ)

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಬ್ರಹ್ಮಾವರ) :- ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರವನ್ನು ಕೊಡುವಾಗ ಈ ಕೊಜೆಂಟ್ರಿಕ್ಸ್ ಹೋಯಿತು ಏತಕ್ಕಾಗಿ ಹೋಯಿತು ಎಂದು ನನ್ನ ಹತ್ತಿರ ಕೇಳಿದರು. ಈಗ ಎನ್ರಾನ್‌ಗೆ ಬಂದ ಪರಿಸ್ಥಿತಿಯು ಕೊಜೆಂಟ್ರಿಕ್ಸ್‌ಗೆ ಬಂತು. ಆ ಬಗ್ಗೆ ಪುನಃ ಪ್ರಶ್ನೆಯನ್ನು ಕೇಳುತ್ತಿದ್ದೀರಾ ಎನ್ನುವ ರೀತಿಯಲ್ಲಿ ಮಾತನಾಡಿದರು. ಬೆಂಗಳೂರು ವಾಟರ್ ಸಪ್ಲೈ ಅನ್ನು ಫ್ರೆಂಚ್ ಕಂಪನಿಗೆ ಸಹಭಾಗಿತ್ವಕ್ಕೆ ಕೊಟ್ಟರೆ ಪುನಃ ಸರಕಾರ ಇಕ್ಕಟ್ಟಿಗೆ ಸಿಕ್ಕಿ ಬೀಳುತ್ತದೆ. ಇವೊತ್ತು ಟ್ಯಾಪ್‌ನಿಂದ ನೀರು ಲೀಕ್ ಆದರೆ - Government is the only known vessel which leakes from the top, ಎಂದು ಆಗಿದೆ. ಅದಕ್ಕೋಸ್ಕರ ಈ ಆಪಾದನೆಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಸರಕಾರ ಈ ಆದೇಶವನ್ನೇನು ಮಾಡಿದೆ, ಅದನ್ನು ತಡೆ ಹಿಡಿಯಬೇಕಾಗುತ್ತದೆ. ಇಲ್ಲದಿದ್ದರೆ ಈ ಆಪಾದನೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ತತ್ಕಾಲಕ್ಕೆ ಅದನ್ನು ತಡೆ ಹಿಡಿದು ಆ ನಂತರ ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಚರ್ಚೆಯನ್ನು ಮಾಡಿ ಮುಂದಿನ ಕ್ರಮವನ್ನು ಕೈಗೊಳ್ಳಬಹುದು ಎಂದು ನಾನು ಮಾನ್ಯ ಚಂದ್ರೇಗೌಡರವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಮಾನ್ಯ ಚಂದ್ರೇಗೌಡರೇ, ತಾವೇನಾದರೂ ಹೇಳುತ್ತೀರಾ ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :- ಸನ್ಮಾನ್ಯ ಸಭಾಧ್ಯಕ್ಷರೇ, ನನ್ನ ಹತ್ತಿರ ಇರಬಹುದಾದ, ಇದ್ದಿರ ಬಹುದಾದ ಮತ್ತು ನನ್ನ ವ್ಯಾಪ್ತಿಗೆ ಕೆಲವು ಮೀರಿದ ವಿಚಾರಗಳನ್ನು ಈ ಸದನದಲ್ಲಿ ಇಟ್ಟಿದ್ದೇನೆ. ಯಾವುದನ್ನೂ ಮುಚ್ಚಿಡತಕ್ಕಂಥ ಪ್ರಯತ್ನವನ್ನು ನಾನು ಮಾಡಿಲ್ಲ. ಆದರೂ ಅವರಿಗೆ ಸಮಾಧಾನವಾಗಿಲ್ಲ. ಆದ್ದರಿಂದ ಸದನವನ್ನು ಮುಂದಕ್ಕೆ ಹಾಕಿ ಸ್ವಲ್ಪ ಹೊತ್ತು ತಮ್ಮ ಕಚೇರಿಯಲ್ಲಿ ಕುಳಿತು ಮಾತನಾಡಲು ಅವಕಾಶವಿದೆ ಎಂದಾದರೆ ಅಲ್ಲಿ ಕುಳಿತು ಮಾತನಾಡೋಣ, insted of wasting the time of the House.

ಅಧ್ಯಕ್ಷರು :- ದಯವಿಟ್ಟು ತಮ್ಮ ನಾಯಕರುಗಳು ಮತ್ತು ಆಡಳಿತ ಪಕ್ಷದವರು ನಮ್ಮ ಚೇಂಬರ್‌ಗೆ ಬಂದರೆ 15 ನಿಮಿಷಗಳ ಕುಳಿತು ಚರ್ಚಿಸೋಣ. ಸದನವನ್ನು ಅರ್ಧಗಂಟೆಯ ಕಾಲ ಮುಂದೂಡುತ್ತಿದ್ದೇನೆ ಸದನವು 11-50 ಗಂಟೆಗೆ ಮುಂದೂಡಲ್ಪಟ್ಟು ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು.

(ಸದನವು 1.10ಕ್ಕೆ ಪ್ರಾರಂಭವಾಯಿತು ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

(ಬಿಜೆಪಿ, ಜನತಾ ದಳ (ಯು) ಮತ್ತು (ಎಸ್) ಸದಸ್ಯರುಗಳಿಂದ ಧರಣಿ)

ಅಧ್ಯಕ್ಷರು :- ಮಾನ್ಯ ಚಂದ್ರೇಗೌಡರೇ, ತಾವು ಏನಾದರೂ ಹೇಳುತ್ತೀರಾ ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮ್ಮ ಕೊಠಡಿಯಲ್ಲಿ ಸಾಕಷ್ಟು ಸುಧೀರ್ಘವಾಗಿ ಚರ್ಚೆ ಮಾಡಿದ್ದೇವೆ. ನಾನು ಪುನಃ ಪ್ರತಿಪಕ್ಷದ ಮುಖಂಡರುಗಳಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಸಭಾನಾಯಕರು ಬಂದಿದ್ದಾರೆ. ಈಗ ತಾವು ತಮ್ಮ ತಮ್ಮ ಸ್ಥಾನಕ್ಕೆ ಹೋದರೆ ತಮ್ಮ ಅಪೇಕ್ಷೆಯಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು :- ಜಗದೀಶ್ ಶೆಟ್ಟರ್‌ರವರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

SRI D.B. CHANDRE GOWDA :- First the House should be set into order. ನಿಮ್ಮ ಗಲಾಟೆಯೊಳಗೆ ನಮ್ಮ ಧ್ವನಿ ತಲುಪುವುದೇ ಇಲ್ಲ. ಅದೇ ಕಷ್ಟ.

ಅಧ್ಯಕ್ಷರು :- ತಾವುಗಳು ಅಲ್ಲಿ ನಿಂತುಕೊಳ್ಳುವುದು ಅಷ್ಟು ಚೆನ್ನಾಗಿ ಇರುವುದಿಲ್ಲ. ತಮ್ಮ ಸೀಟುಗಳಿಗೆ ಹೋಗಿ ಒಬ್ಬೊಬ್ಬರೆ ಮಾತನಾಡುವುದು ಮತ್ತೆ ಇಲ್ಲಿ ಬಂದು ನಿಂತುಕೊಳ್ಳುವುದು ಅಷ್ಟು ಚೆನ್ನಾಗಿ ಇರುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :- ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರಿನ ನೀರಿನ ಅವಶ್ಯಕತೆಗಳನ್ನು ವೈಜ್ಞಾನಿಕವಾದಂತಹ ರೀತಿಯಲ್ಲಿ ಪೂರೈಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಕೆಲವು ಅನುಮಾನಗಳು ಕೆಲವು ರಿಸರ್ವೇಷನ್ಸ್ ವ್ಯಕ್ತವಾಗಿರತಕ್ಕಂಥ ಹಿನ್ನೆಲೆಯಲ್ಲಿ ನಾನು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿರತಕ್ಕಂಥಾದ್ದು ಬಹಳ ಅಗತ್ಯ. ಈ ವಿಚಾರ ನಿನ್ನೆ ಪ್ರಸ್ತಾಪವಾದಂತಹ ಕಾಲದಲ್ಲಿ ನಾನು ಈ ಸದನದಲ್ಲಿ ಇರಲಿಲ್ಲ. ತಮ್ಮ ಅಪ್ಪಣೆಯನ್ನು ಪಡೆದು ನಾನು ಕೇರಳದ ರಾಜಧಾನಿಗೆ ಹೋಗಿದ್ದೆ. ಈಗತಾನೆ ಬಂದೆ. ಈ ಬೆಂಗಳೂರು ನಗರದ ಬೆಳವಣಿಗೆ ಹಾಗೂ ಅದಕ್ಕೆ ಸಿಕ್ಕಿರತಕ್ಕಂಥ ವಿಶ್ವ ಪ್ರಾಮುಖ್ಯತೆ ಇವುಗಳೆಲ್ಲವನ್ನೂ ಕೂಡ ಗಮನಿಸಿ, ಇನ್‌ಫ್ರಾಸ್ಟ್ರಕ್ಚರನ್ನು ನಾವು ಎಲ್ಲಿಯವರೆಗೆ ಸಮಾಧಾನಕರವಾದಂತಹ ರೀತಿಯಲ್ಲಿ ನಡೆಸುವುದಕ್ಕೆ ಆಗುವುದಿಲ್ಲವೋ ಅಲ್ಲಿಯವರೆಗೆ ಬೆಂಗಳೂರನ್ನು truly city with international infrastructure.... ಹಾಗೆ ಎಂದು ಹೇಳಿ ವಿದ್ಯುತ್, ರಸ್ತೆ ಈಗತಾನೆ ನಮ್ಮ ಕೊಂಕಣ ರೈಲ್ವೆ ಮಾಡಿದಂತಹ ಶ್ರೀ ಶ್ರೀಧರನ್‌ರವರು ಬಂದಿದ್ದರು. ಅವರು ದೆಹಲಿಯಲ್ಲಿ ಹೇಗೆ ಮೆಟ್ರೊ ಮತ್ತು ಎಲೆವೇಟೆಡ್ ಟ್ರಾಫಿಕ್ ಸಿಸ್ಟಂ ಏನು ಜಾರಿಗೆ ತಂದಿದ್ದಾರೆ ಅಂಥಾದ್ದೇ ಒಂದು ಫೀಜಬಿಲಿಟಿ ಸ್ಟಡೀಸ್ ಇಲ್ಲಿ ಮಾಡುವುದಕ್ಕೆ ಕೊಂಕಣ ರೈಲ್ವೆ ಗೌವರ್ನ್‌ಮೆಂಟ್ ಆಫ್ ಇಂಡಿಯಾ ಅಂಡರ್‌ಟೇಕಿಂಗ್ ಮುಂದೆ ಬಂದಿದ್ದಾರೆ. ಈಗ ತಾನೇ ತೀರ್ಮಾನ ತೆಗೆದುಕೊಂಡು ಈ ಫೀಜ್ಹಬಿಲಿಟಿ ಸ್ಟಡ್ಡಿಅನ್ನು ಅವರು ಮಾಡಬೇಕಾಗಿದೆ ಅದಕ್ಕೆ ಗೌವರ್ನ್‌ಮೆಂಟ್ ಆಫ್ ಇಂಡಿಯಾದವರು 40 ಭಾಗ ಕೊಡುತ್ತಾರೆ ನಾವು 60 ಭಾಗ ವೆಚ್ಚವನ್ನು ಭರಿಸಿ ಈ ಫೀಜ್ಹಬಿಲಿಟಿ ರಿಪೋರ್ಟ್‌ಗೆ ಚಾಲು ಕೊಡುತ್ತಿದ್ದೇವೆ. ಅದರ ವರದಿ ಆರು ತಿಂಗಳಲ್ಲಿ ಬರುತ್ತದೆ. ಇನ್ನು ಏಳೆಂಟು ತಿಂಗಳಲ್ಲಿ ಅಥವಾ

ಒಂದು ವರ್ಷದಲ್ಲಿ ಈ ಬೆಂಗಳೂರಿನ ಟ್ರಾಫಿಕ್ ಸಮಸ್ಯೆಯನ್ನು ನಿರ್ಣಾಯಕವಾದಂತಹ ರೀತಿಯಲ್ಲೆ ಬಗೆಹರಿಸುವುದಕ್ಕೆ ವ್ಯವಸ್ಥಿತವಾದಂತಹ ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕೆಂದು ಹೇಳಿ ತೀರ್ಮಾನವನ್ನು ಮಾಡಿದ್ದೇವೆ. ಹಾಗೆಯೇ ನೀರಿನ ವಿಚಾರದಲ್ಲಿ ಕೂಡ ಕಳೆದ ಹತ್ತು ವರ್ಷಗಳಲ್ಲಿ ನೀರು ಹೇಗೆ ವಿತರಣೆ ಮಾಡಬೇಕು, 80 ವರ್ಷದ ಹಿಂದೆ ಹಾಕಿದಂತಹ ಪೈಪುಗಳು ಸ್ಥಿತಿ ಏನಾಗಿದೆ, 80 ವರ್ಷದ ಹಿಂದೆ ಹಾಗೂ ಹತ್ತಾರು ವರ್ಷಗಳ ಹಿಂದೆ ಹಾಕಿದಂತಹ ಪೈಪುಗಳು ಕೆಲವೊಂದು ಭಾಗ ಸಿವರೇಜ್ ಪೈಪುಗಳ ಜೊತೆಯಲ್ಲಿ ಮಿಕ್ಸ್ ಆಗಿ ಆ ನೀರನ್ನು ಉಪಯೋಗಿಸಿದಂತಹ ಲಕ್ಷಾಂತರ ಜನರ ಸ್ವಾಸ್ಥಕ್ಕೆ ಗಂಡಾಂತರ ತರತಕ್ಕಂಥ ಸಾಧ್ಯತೆಗಳು ಇವೆ ಎನ್ನುವ ಅರಿವಿನ ಹಿನ್ನೆಲೆಯಲ್ಲಿ ಇದಕ್ಕೆ ಒಂದು ವೈಜ್ಞಾನಿಕವಾದಂತಹ ಅಪ್ರೋಚ್ ಬೇಕೆಂದು ಹೇಳಿ, ಹಿಂದೆ ಏನು ಪ್ರಯತ್ನಗಳನ್ನು ನಡೆಸಿದರು ಆ ಪ್ರಯತ್ನಗಳನ್ನು ನಾವು ಮುಂದುವರೆಸುತ್ತಿದ್ದೇವೆ. ಬೆಂಗಳೂರಿಗೆ ಬಲ್ಕ್ ವಾಟರ್ ಸಪ್ಲೈ ಅದರ ಪೂರ್ಣ ಜವಾಬ್ದಾರಿ ಬಿಡಬ್ಲ್ಯೂಎಸ್‌ಎಸ್‌ಬಿ ಯವರದು. ಆ ನೀರಿನ ಸಂಪೂರ್ಣ ಹತೋಟಿ ಅವರಿಗೆ ಸೇರುತ್ತದೆ. ಈ ಸರ್ಕಾರ ಬಂದ ಪ್ರಥಮ ದಿನದಿಂದಲೇ ನಾವು ಈ ನೀತಿಯನ್ನು ಈ ರಾಜ್ಯದ ಜನರ ಮುಂದೆ ಇಟ್ಟಿದ್ದೇವೆ. ಆ ನೀತಿ ಡಾ|| ಮನಮೋಹನ್ ಸಿಂಗ್ ಅವರು 1991ರಲ್ಲಿ ಪ್ರಸ್ತಾಪ ಮಾಡಿದಂತಹ ನೀತಿ. ಖಾಸಗಿ ಸಂಸ್ಥೆಗಳಿಗೆ ಅವಕಾಶವನ್ನು ಕಲ್ಪಿಸಿಕೊಡುವುದರ ಮೂಲಕ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಈ ಪೂರೈಕೆಗಳನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವುದು ಇದೆ. ಆದರೆ ಇದರಲ್ಲಿ ಪಾರದರ್ಶಕತೆ ಇರಬೇಕು, ಇದರಿಂದ ಜನರಿಗೆ ನೆಮ್ಮದಿಸಿಗಬೇಕು. ಹೀಗೆ ನಾವು ಪವರ್‌ಗೆ ಅಫೋರ್ಡೆಬಲ್ ಕಾಸ್ಟ್ ಆಫ್ ಪವರ್ ಎನ್ನುವಂತಹ ಥಿಯರಿಯನ್ನು ಜಾರಿಗೆ ತಂದಿದ್ದೇವೆ, ಹಾಗೆ ಬೆಂಗಳೂರು ನಗರದ ಜನರಿಗಾಗಲಿ ಬೇರೆ ನಗರದ ಜನರಿಗಾಗಲಿ ನೀರನ್ನು ಕೊಡತಕ್ಕಂಥ ಕಾಲದಲ್ಲಿ ಅಫೋರ್ಡೆಬಲ್ ಕಾಸ್ಟ್ ಇರಬೇಕು. ವಾಟರ್ ಲೀಕೇಜ್ ಏನು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ, ಆ ಲೀಕೇಜ್ ಅನ್ನು ತೇಪೆ ಹಾಕತಕ್ಕಂಥ ಕೆಲಸವನ್ನು ಇದುವರೆಗೂ ಮಾಡಿಕೊಂಡು ಬಂದಿದ್ದೇವೆ. Leakage ಅನ್ನು acceptable international standards ಗೆ ತರತಕ್ಕಂಥದ್ದು ಈ ಪ್ರಯತ್ನದಲ್ಲಿ ಇದೆ. ಆ ಸದನದಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆ ನಡೆಯಿತು. ಇಲ್ಲಿ ವ್ಯಕ್ತವಾದಂತಹ ಹಲವಾರು ಅನುಮಾನಗಳು ಅಲ್ಲಿಯೂ ಕೂಡ ವ್ಯಕ್ತವಾದವು. ಆಗ ಅವರಿಗೆ ನಾನು ಸ್ಪಷ್ಟಪಡಿಸಿದ್ದೇನೆ. ಈ ಸದನದಲ್ಲಿಯೂ ಕೂಡ ಸ್ಪಷ್ಟಪಡಿಸುವುದಕ್ಕೆ ಇಚ್ಛೆ ಪಡುತ್ತೇನೆ. ಸರ್ಕಾರಕ್ಕೆ ಮುಕ್ತವಾದಂತಹ ಮನಸ್ಸಿದೆ. ಯಾವುದಕ್ಕೂ ನಾವು ಕಟ್ಟುಬಿದ್ದಿಲ್ಲ. ಇಲ್ಲಿ ಫ್ರೆಂಚ್ ಗೌವರ್ನಮೆಂಟ್ ಅಸಿಸ್ಟೆನ್ಸ್ ಇದೆ. ಈ ಸ್ಕೀಮ್ ಫ್ರೆಂಚ್ ಪ್ರೊಟೊಕಾಲ್‌ಗೆ ಯಾವಾಗ ಸೇರುತ್ತದೆ, Government of India, Ministry of Economic Affiars fully they will be involved in this scheme. Their representatives will be present on this special purpose vehicle also. ಫ್ರೆಂಚ್ ಗೌವರ್ನಮೆಂಟ್‌ನವರು ಕೊಡತಕ್ಕಂಥ ಸಾಫ್ಟ್ ಲೋನ್ ಏನಿದೆ, ಆ ಸಾಫ್ಟ್ ಲೋನಿನಲ್ಲಿ ಹೇಗೆ ವರ್ಲ್ಡ್ ಬ್ಯಾಂಕ್‌ನವರು ನಮಗೆ ಕೊಡತಕ್ಕಂಥ ಲೋನ್ ಕಾಂಪೊನೆಂಟ್‌ನಲ್ಲಿ 30 ಪರ್ಸೆಂಟ್ ಗ್ರಾಂಟ್ ಇರುತ್ತದೆ. ಆ 30 ಪರ್ಸೆಂಟ್ ಗ್ರಾಂಟ್ ಒಳಗೊಂಡಿರುವಂತಹ ಈ ಒಂದು ಪ್ಯಾಕೇಜ್‌ಗೆ ನಾವು ಪ್ರಯತ್ನ ಮಾಡುತ್ತಿದ್ದೇವೆ ; ಫ್ರೆಂಚ್ ರಾಯಭಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ ; ಮತ್ತೆ ಕೇಂದ್ರ ಸರ್ಕಾರದವರ

ಜೊತೆಯಲ್ಲೂ ಸಮಾಲೋಚನೆಯನ್ನು ಮಾಡಿದ್ದೇವೆ. ನಾವು ಒಂದು ವಿಚಾರವನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು, ಅದು ಏನೆಂದರೆ ನಾವು ಕೇಂದ್ರ ಸರ್ಕಾರದ ಆಶೀರ್ವಾದವಿಲ್ಲದೇ, ಕೇಂದ್ರ ಸರ್ಕಾರದ ಸಹಮತವಿಲ್ಲದೇ, ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲದೇ, ರಾಜ್ಯ ಸರ್ಕಾರವೇ, ಮಿಕ್ಕ ಒಂದು ದೇಶದೊಡನೆ ಯಾವ ಲೋನ್ ಅನ್ನು ನೆಗೋಶಿಯೇಟ್ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಬೇಸಿಕ್ ಪ್ರಿನ್ಸಿಪಲ್ ಏನಿದೆ, ಅದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಅದುದರಿಂದ ಈ ಒಂದು ಬೇಸಿಕ್ ಫ್ರೇಮ್ ವರ್ಕ್‌ನಲ್ಲಿ ನಾವು ನಮ್ಮ ರಾಜ್ಯಕ್ಕಾಗಲಿ, ಬೆಂಗಳೂರಿನ ಜನಗಳಿಗಾಗಲೀ, ಯಾವ ರೀತಿಯಲ್ಲೂ ಕೂಡ ಅವರ ಸಾರ್ವಭೌಮತೆಯನ್ನು ಒಪ್ಪದಿರುವಂತಹ ಪ್ರಮೇಯ ಇದರಲ್ಲಿ ಉದ್ಭವ ಆಗತಕ್ಕಂಥಾದ್ದು ಸಾಧ್ಯವೇ ಇಲ್ಲ. ಆದರೂ ನಮಗೆ ಮುಕ್ತವಾದಂತಹ ಮನಸ್ಸು ಇದೆ, ಆ ಸದನದ ಸದಸ್ಯರು ಯಾರು ಈ ವಿಚಾರದಲ್ಲಿ ಚರ್ಚೆಗೆ ಭಾಗವಹಿಸಿದ್ದಾರೆ, ಅವರನ್ನು ನಾನು ಆಹ್ವಾನ ಮಾಡುತ್ತೇನೆಂದು ಹೇಳಿದ್ದೇನೆ ; ಅದೇ ಆಶ್ವಾಸನೆಯನ್ನು ಈ ಸದನದಲ್ಲೂ ಕೂಡ ಮಾನ್ಯ ವಿರೋಧಪಕ್ಷದ ಹಾಗೂ ಆಡಳಿತ ಪಕ್ಷದ ಸದಸ್ಯರುಗಳು ಯಾರು ಈ ವಿಚಾರದಲ್ಲಿ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ, ಹಾಗೂ ಅನುಮಾನಗಳನ್ನು ಇಟ್ಟುಕೊಂಡಿದ್ದಾರೆ, ಅವರನ್ನೆಲ್ಲಾ ಆಹ್ವಾನ ಮಾಡಿ, ಅನಂತರ ನಾವು, ನೀವು ಒಟ್ಟಿಗೆ ಸೇರಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬಹುದಾಗಿದೆ. ಆದರೆ ಈ ತೀರ್ಮಾನ ಬೆಂಗಳೂರು ಜನರ ಹಿತದೃಷ್ಟಿಯಿಂದ ಆಗಬೇಕು. ಬೆಂಗಳೂರಿನ ಭವಿಷ್ಯದ ಹಿತದ ದೃಷ್ಟಿಯಿಂದ ಆಗಬೇಕು, ಆ ಕಾರಣ ಇವತ್ತು ಯಾವ ನಿರ್ಧಾರಗಳೂ ಆಗಲಿಲ್ಲ, ಆದರೆ ಒಂದೇ ಒಂದು ನಿರ್ಧಾರ ಏನಾಗಿದೆ ಎಂದರೆ ಫ್ರೆಂಚ್ ಪ್ರೊಟೊಕಾಲ್‌ಗೆ ಟ್ರೈ ಮಾಡಬೇಕೆಂದು ಒಂದು ಆಗಿದೆ ವಿನಹ ಅವರು ಮಾಡಬೇಕಾಗಿದ್ದರೆ ಈ ಒಂದು ಕಾಗದ ಅವರಿಗೆ ಅವಶ್ಯವಾಗಿ ಬೇಕಾಗಿತ್ತು. ಆ ಕೆಲಸವನ್ನು ಮಾಡಿದ್ದೇವೆ, ಏಕೆಂದರೆ ನಾವು ರಾಜಕೀಯ ಪಕ್ಷಗಳಾಗಿ ಜನತೆಗೆ ಅಕೌಂಟಬಿಲಿಟಿ ಇದೆ ನಮ್ಮದು ; ಏಕೆಂದರೆ ನಾವು ಕಾರ್ಪೊರೇಷನ್‌ಗಳ ಚುನಾವಣೆಯಲ್ಲಿ ಗೆದ್ದು, ಆ ಸಂದರ್ಭದಲ್ಲಿ ನೀರಿನ ವಿಚಾರವಾಗಿ ಕೆಲವು ಭರವಸೆಗಳನ್ನು ಕೊಟ್ಟಿದ್ದೇವೆ. ನಾವು 1999ನೇ ಸೆಪ್ಟೆಂಬರ್‌ನಲ್ಲಿ ಗೆದ್ದಾಗ ಆಗಲೂ ಕೆಲವು ಭರವಸೆಗಳನ್ನು ನಾವು ಕೊಟ್ಟಿದ್ದೇವೆ. ಅದ್ದರಿಂದ ಆ ಭರವಸೆಗಳೆಲ್ಲವನ್ನು ಈಡೇರಿಸಬೇಕಾಗಿರತಕ್ಕಂಥದ್ದು ನಮ್ಮ ಮೇಲೆ ಬಿದ್ದಿರುವಂತಹ ಒಂದು ಪವಿತ್ರವಾದಂತಹ ಆಬ್ಲಿಗೇಷನ್, ಆ ಆಬ್ಲಿಗೇಷನ್ ಅನ್ನು ಡಿಸ್‌ಚಾರ್ಜ್ ಮಾಡುವಂತಹ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಅದುದರಿಂದ ನಿಮ್ಮಲ್ಲಿ ರಿಸರ್ವೇಶನ್ಸ್ ಇದ್ದರೆ, ಆ ರಿಸರ್ವೇಷನ್ಸ್‌ಗೆ ಸೂಕ್ತವಾದಂತಹ ಮಾಹಿತಿಯನ್ನು ನಿಮಗೆ ಒದಗಿಸಿಕೊಡುತ್ತೇವೆ. ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ ; ಅನಂತರ ನಾವು ತೀರ್ಮಾನವನ್ನು ತೆಗೆದುಕೊಳ್ಳಬಹುದು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಈ ವಿಷಯದ ಬಗ್ಗೆ ಒಂದಷ್ಟು ವಿಚಾರಗಳನ್ನು ಹೇಳಿದರು. ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಸುರೇಶ್ ಕುಮಾರ್‌ರವರು, ಮಾನ್ಯ ಬಿ.ಎನ್. ಬಚ್ಚೇಗೌಡರು, ಮಾನ್ಯ ಪಿ.ಜಿ.ಆರ್. ಸಿಂಧ್ಯರವರು, ಮಾನ್ಯ ಸೋಮಣ್ಣನವರು ಹಾಗೂ ಇನ್ನಿತರ ಸದಸ್ಯರುಗಳು ಸಾಕಷ್ಟು ವಿವರವಾಗಿ ಚರ್ಚೆಯನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ಸದನದಲ್ಲಿ ಇರಲಿಲ್ಲ ಆ ಸಂದರ್ಭದಲ್ಲಿ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇಲ್ಲಿ ನಡೆದಂತಹ ಚರ್ಚೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಜಲಮಂಡಲಿಯನ್ನು ಖಾಸಗಿಯವರಿಗೆ ಅಂದರೆ ಫ್ರೆಂಚ್ ಕಂಪನಿಯವರಿಗೆ ತಾವು ಕೊಟ್ಟು

ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಇದರ ಬಗ್ಗೆ ಒಂದು ಎಂಓಯು ಮಾಡುತ್ತಿದ್ದಿರಲ್ಲಾ, ಅದರಿಂದ ಬೆಂಗಳೂರು ಜನತೆಗೆ ಭಾರವಾಗುತ್ತಿದೆ, ಎನ್ನುವಂಥಾದ್ದು, ಮತ್ತೆ ಇದು ಎಕಾನಾಮಿಕಲಿ ಫಿಜಿಬಿಲಿಟಿ ಅಲ್ಲ ವೆನ್ನುವಂಥಾದ್ದು, ಈ ವಿಷಯಗಳು ಮುಖ್ಯವಾಗಿ ಚರ್ಚೆಯಲ್ಲಿ ಬಂದಿರುವಂಥಾದ್ದು, ಇನ್ನೊಂದು ಪ್ರಮುಖವಾಗಿ ಬೆಂಗಳೂರಿನಲ್ಲಿದ್ದಂತಹ ಶಾಸಕರು ಇರಬಹುದು, ಜನಪ್ರತಿನಿಧಿಗಳಿರಬಹುದು, ಅವರ ಅಭಿಪ್ರಾಯ ಸಂಗ್ರಹಣೆ ಇರಬಹುದು, ಕನ್ಸಲ್ಟೇಶನ್ ಎನ್ನುವಂಥಾದ್ದು ಇರಬಹುದು ಅಥವಾ ವಿಶ್ವಾಸಕ್ಕೆ ತೆಗೆದುಕೊಳ್ಳುವಂಥಾದ್ದು ಇರಬಹುದು; ಇದು ಯಾವುದೂ ಆಗಲಿಲ್ಲವೆಂಬ ಒಂದು ಕೊರಗು ಇದೆ ; ಇವು ಪ್ರಮುಖವಾದಂಥಾದ್ದು ; ಮತ್ತೆ ಎಕಾನಾಮಿಕಲಿ ಫಿಜಿಬಲ್ ಅಲ್ಲವೆನ್ನುವಂಥಾದ್ದು. ಈಗ ತಾವು ಏನು ಹೇಳಿದ್ದಿರೆಂದರೆ ಇದರ ಬಗ್ಗೆ ಮುಕ್ತ ಮನಸ್ಸಿನಿಂದ ಇದ್ದೇವೆಂದು ಹೇಳಿದ್ದೀರಿ, ಇದರ ಸಾಧ್ಯ ಸಾಧ್ಯತೆಯ ಬಗ್ಗೆ, ಅಡ್ವೆನ್‌ಟೇಜ್ ಡಿಸ್-ಅಡ್ವಾನ್‌ಟೇಜ್ ಬಗ್ಗೆ, ಮತ್ತೆ ಮತ್ತೊಂದು ಚರ್ಚೆಯಲ್ಲಿ ಪ್ರಮುಖವಾಗಿ ಬಂದಿರುವಂಥಾದ್ದು ಈ ಖಾಸಗೀಕರಣ ಮಾಡುವಂಥಾದ್ದು ಅವರಿಗೆ ವಹಿಸಿಕೊಡುವಂಥದ್ದು ಅವಶ್ಯಕತೆ ಇತ್ತೇ ಎಂಬ ಪ್ರಶ್ನೆಯೂ ಇದೆ. ಈಗ ಈ ಜಲಮಂಡಲಿ ಸರಿಯಾಗಿ ನಡೆಸಿಕೊಂಡು ಹೋಗುವಂತಹ ಸಂದರ್ಭದಲ್ಲಿ ಇದರ ಅವಶ್ಯಕತೆ ಇತ್ತೇ ? ಮತ್ತೆ ಅಲ್ಲಿ ಕಾಸ್ಟ್ ಫ್ಯಾಕ್ಟರ್, ಇವತ್ತಿನ ದಿವಸ ಜಲಮಂಡಲಿಯವರು ಈ ಐದು ವರ್ಷಗಳಲ್ಲಿ ಏನು ಮಾಡುತ್ತಾರೆ, ಈಗ ತಾವು ಫ್ರೆಂಚ್ ಕಂಪನಿಯವರಿಗೆ ಏನು ಕೊಡುತ್ತಿದ್ದೀರಿ, ಆ ಐದು ವರ್ಷಗಳ ಕಾಸ್ಟ್ ಫ್ಯಾಕ್ಟರ್ ಇದನ್ನೆಲ್ಲಾ ನೋಡಿದಾಗ, ಈ ಎಕಾನಾಮಿಕಲಿ ಫಿಜಿಬಿಲಿಟಿಯ ಬಗ್ಗೆ, ಮತ್ತೆ ಇದನ್ನು ಖಾಸಗೀಕರಣ ಮಾಡುವಂಥಾದ್ದರ ಬಗ್ಗೆ, ಕನ್‌ಫ್ಯೂಷನ್ ಕ್ರಿಯೇಟ್ ಆಗಿದೆ, ಇದರಲ್ಲಿ ಏನೋ ಒಂದು ವ್ಯವಹಾರಗಳು ನಡೆದಿದೆಯೋ ಎಂಬ ಸಂಶಯಗಳು ಉದ್ಭವವಾಗಿದೆ. ಅದುದರಿಂದ ಈ ವಿಷಯವನ್ನು ಮುಕ್ತ ಮನಸ್ಸಿನಿಂದ ಚರ್ಚೆ ಮಾಡುವಂಥ ಸಂದರ್ಭದಲ್ಲಿ, ಈಗ ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ನಾನು ಮುಕ್ತ ಮನಸ್ಸಿನಿಂದ ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆಂದು ಒಪ್ಪಿಕೊಂಡಿದ್ದಾರೆ, ಶಾಸಕರು ಬರಲಿ, ಯಾರು ಇಂಡಸ್ಟ್ರಿಯಲಿ ಇದ್ದಾರೆ, ಇಂಟರೆಸ್ಟಿಂಗ್ ಇದ್ದಾರೆ, ಅವರು ಬರಲಿ, ನಾನು ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ, ಎನ್ನುವ ಮಾತನ್ನು ಹೇಳಿದರು. ಹಾಗಾದರೆ ಆ ರೀತಿಯ ಅಭಿಪ್ರಾಯ ಮಾನ್ಯ ಮುಖ್ಯಮಂತ್ರಿಯವರಲ್ಲಿ ಇದ್ದರೆ, ದಯಮಾಡಿ ಈ ಅಧಿವೇಶನ ಮುಗಿದ ತಕ್ಷಣ ಒಂದು ಸಭೆಗೆ ದಿನಾಂಕವನ್ನು ನಿಗದಿ ಮಾಡಿ, ಎಲ್ಲಾ ಶಾಸಕರನ್ನು ಕರೆಸಿ, ಮತ್ತೆ ಯಾರ್ಯಾರಿಗೆ ಆಸಕ್ತಿ ಇದೆಯೋ, ಅವರನ್ನು ಕರೆಸಿ ಮಾತನಾಡಿ, ಅಲ್ಲಿಯವರೆಗೂ ತಾವು ಇವತ್ತು ಏನು ಆದೇಶವನ್ನು ಹೊರಡಿಸಿದ್ದೀರಿ, ಆ ಫ್ರೆಂಚ್ ಕಂಪನಿಯವರ ಜೊತೆಗೆ ನೆಗೋಶಿಯೇಷನ್ ಮಾಡುವುದಕ್ಕೆ ಮತ್ತೆ ಎಂಓಯು ಮಾಡಿಕೊಳ್ಳುವ ಬಗ್ಗೆ, ಏನು ಆದೇಶವನ್ನು ಹೊರಡಿಸಿದ್ದೀರಿ, ಆ ಆದೇಶವನ್ನು abeyance ನಲ್ಲಿ ಇಡಿ. ಅಲ್ಲಿಯವರೆಗೂ atleast for 8 days, 15 days, for one month, ಅಲ್ಲಿಯವರೆಗಾದರೂ abeyance ನಲ್ಲಿ ಇಟ್ಟರೆ, ನಮಗೂ ಮುಕ್ತವಾಗಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ, ಸರ್ಕಾರ bonafide ಆಗಿ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ; ಒಂದು ತಿಂಗಳ ಅವಕಾಶವನ್ನು ಕೊಟ್ಟಿದ್ದಾರೆ, ಅಷ್ಟರಲ್ಲಿ ನಾವು ನಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಸರ್ಕಾರದ ಮುಂದಿಡಬಹುದು. ಇವತ್ತು ಯಾವುದೇ ಒಂದು ರಾಜ್ಯದ ಹಿತಾಸಕ್ತಿಯ ಬಗ್ಗೆ ಎಲ್ಲಾ ಹಂತಗಳಲ್ಲೂ ಅಂದರೆ ವೀರಪ್ಪನ್ ಪ್ರಕರಣವಿರಬಹುದು,

ಕಾವೇರಿ ನದಿ ಸಮಸ್ಯೆ ಇರಬಹುದು ಅಥವಾ ಕೃಷ್ಣ ಬೇಸಿನ್ ಸಮಸ್ಯೆ ಇರಬಹುದು, ಇವುಗಳಿಗೆ ತಾವು ಯಾವ ರೀತಿಯಾಗಿ ಸರ್ವಪಕ್ಷಗಳ ಸದಸ್ಯರುಗಳ ಸಭೆಯನ್ನು ಕರೆದು ಎಲ್ಲಾ ಪಕ್ಷಗಳ ನಾಯಕರುಗಳ ಮೀಟಿಂಗ್ ಕರೆದು, ಅಭಿಪ್ರಾಯಗಳನ್ನು, ವಿಶ್ವಾಸವನ್ನು ತೆಗೆದುಕೊಂಡು ಏನು ಕೆಲಸವನ್ನು ಮಾಡುವಂಥಾದ್ದು ಮಾಡಿದ್ದೀರಿ, ಇದನ್ನು ಸಹ ಇದು ಬೆಂಗಳೂರು ನಗರ ಎಂದರೆ ಕ್ಯಾಪಿಟಲ್ ಅಂದರೆ ದೊಡ್ಡದಾದಂತಹ ಮತ್ತು ರಾಷ್ಟ್ರದಲ್ಲಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದಂತಹ ನಗರವಾಗಿದೆ. ಈ ಒಂದು ನೀರಿನ ಸಮಸ್ಯೆ ಬೆಂಗಳೂರಿನದು, ಪ್ರಮುಖವಾದ ಸಮಸ್ಯೆಯಾಗಿದೆ ಈ ಸಂದರ್ಭದಲ್ಲಿ ಎಲ್ಲರ ವಿಶ್ವಾಸವನ್ನು ಗಣನೆಗೆ ತೆಗೆದುಕೊಳ್ಳುವಂತಹ ಅವಶ್ಯಕತೆ ಇದೆ. ಈ ವಿಚಾರವಾಗಿ ತಾವು ಮುಂದೆ ಬಂದಿದ್ದೀರಿ. ಇದಕ್ಕೆ ಪೂರ್ಣ ಮಟ್ಟದಲ್ಲಿ ಚರ್ಚೆಗೆ, ಮುಕ್ತವಾದಂತಹ ಚರ್ಚೆಗೆ, ಬಂದಿದ್ದೇವೆಂದು ಹೇಳಿದ್ದೀರಿ, ಅದಕ್ಕೆ ಏನಾದರೂ ಒಂದು ಅರ್ಹತೆ, ಸೂಕ್ತತೆಯನ್ನು ಕೊಡುವುದಿದ್ದರೆ ಅದಕ್ಕೊಂದು bonafide ರೂಪವನ್ನು ಕೊಡುವುದಿದ್ದರೆ, ಇವೊತ್ತು ತಾವು ಏನು ನೋಟಿಫಿಕೇಷನ್ ಹೊರಡಿಸಿದ್ದಿರಲ್ಲಾ, ಅದನ್ನು ಚರ್ಚೆಯಾಗುವವರೆವಿಗಾದರೂ ತಡೆ ಹಿಡಿಯಿರಿ, ನಾವು ನಮ್ಮ ಅಭಿಪ್ರಾಯಗಳನ್ನು ಜನಪ್ರತಿನಿಧಿಗಳಾಗಿ ಹೇಳುತ್ತೇವೆ. ತಾವು ತಮ್ಮ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಬೇಕೆಂದು ಏನೂ ಅಲ್ಲ, ಕೊನೆಯ ಪಕ್ಷ ಹಿಯರಿಂಗ್ ಆದರೂ ಇರಬೇಕಲ್ಲಾ, ಇದಕ್ಕೆ ಅವಕಾಶವಿಲ್ಲ, ಇದು ತೊಂದರೆಯಾಗಿರುವಂಥಾದ್ದು, ಅದಕ್ಕೆ ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ, ನಮ್ಮ ಅಭಿಪ್ರಾಯಗಳನ್ನು ಕೇಳಿ, ಅದು ಸರಿಯಲ್ಲವೆಂದು ಕಂಡರೆ ಸರ್ಕಾರಕ್ಕೆ ಏನು ತಿಳಿದಿದೆಯೋ, ಇಲ್ಲಿ, ನಿಮಗೆ ಬಹುಮತ ಇದೆ, ಪಾಸ್ ಮಾಡಿಕೊಂಡು ಹೊಗಬಹುದು. ಆದರೆ ಕೊನೆಯ ಪಕ್ಷ ನಮಗೆ ಮಾತನಾಡಲು ಅವಕಾಶ ಕೊಟ್ಟು, ನಮ್ಮ ಅಭಿಪ್ರಾಯಗಳನ್ನು ಕೇಳಿಕೊಂಡು, ಅದು ಸರಿ ಇದ್ದರೆ ಕನ್ಸಿಡರ್ ಮಾಡಿ, ಇಲ್ಲದಿದ್ದರೆ ಅದು ನಿಮಗೆ ಬಿಟ್ಟದ್ದು, ಕೊನೆಯ ಪಕ್ಷ ಹಿಯರಿಂಗ್ ಆಗುವವರೆಗೆ, ಅಭಿಪ್ರಾಯ ಸಂಗ್ರಹವಾಗುವವರೆಗೆ ಸಹಮತವಾಗುವವರೆಗೆ ತಾವು ಏನು ನೋಟಿಫಿಕೇಷನ್ ಹೊರಡಿಸಿದ್ದೀರಿ, ಅದನ್ನು ತಡೆ ಹಿಡಿಯುವಂತಹ ಕೆಲಸವನ್ನು ಮಾಡಬೇಕು. ನಾವೇನು ಅದನ್ನು ಪೂರ್ತಿಯಾಗಿ abeyance ನಲ್ಲಿ ಇಡಿ, ಎಂದು ಹೇಳುವುದಿಲ್ಲ. At least for some period 15 days, one month ಅಲ್ಲಿಯವರೆಗಾದರೂ ತಾವು ಕನ್ಸಿಡರ್ ಮಾಡಬಹುದು. ಅದಕ್ಕೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಇವೊತ್ತು ಸ್ಪಂದಿಸಬೇಕೆಂದು ನಾನು ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ನಮ್ಮ ಮಂತ್ರಿಯವರು, ಬೆಂಗಳೂರು ನಗರಕ್ಕೆ ಉಸ್ತುವಾರಿ ಮಂತ್ರಿಳಾಗಿದ್ದಾರೆ, ಆದರೆ ನಮ್ಮ ಮಂತ್ರಿಗಳು ನಮ್ಮ ಉಸ್ತುವಾರಿಯನ್ನು ನೊಡಿ ಕೊಳ್ಳುತ್ತಿಲ್ಲ. ಕಳೆದ ಜನವರಿ 2001ರಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿಯವರು ಬೇರೆ ಯಾವುದೋ ಒಂದು ಸಭೆ ಕರೆದಿದ್ದರು, ಬೇರೆ, ಬೇರೆಯವರಿಗೆ ಗೊತ್ತಾಗುತ್ತದೆ, ನಮಗೆ ಗೊತ್ತಾಗುವುದಿಲ್ಲ. ಇಲ್ಲಿ ಆಗುವಂತಹ ವಿಷಯಗಳು ಪೇಪರ್‌ನವರಿಗೆ ಗೊತ್ತಾಗುತ್ತದೆ, ನಮಗೆ ಗೊತ್ತಾಗುವುದಿಲ್ಲ, ನಾವು ಪೇಪರ್‌ನಲ್ಲಿ ಬಂದಿದ್ದ ವಿಷಯವನ್ನು ನೋಡಿಕೊಂಡು ಆ ಸಭೆಯಲ್ಲಿ ಈ ವಿಷಯವನ್ನು ಕೇಳಿದೆವು, ಬೆಂಗಳೂರು ಪಶ್ಚಿಮ ಮತ್ತು ದಕ್ಷಿಣ ಭಾಗಗಳನ್ನು ನೀವು ವಿದೇಶಿ ಕಂಪೆನಿಗಳ ಸಹಯೋಗ, ಸಹಭಾಗಿತ್ವಕ್ಕೆ ಕೊಡವಂಥಾದ್ದು ನಿಜವೇ, ಎಂದು ಕೇಳಿದೆವು, ಆಗ ಅಧ್ಯಕ್ಷರು

ಹೌದು, ಕೊಡುತ್ತಿದ್ದೇವೆಂದು, ಎರಡು ಕಂಪನಿಗಳ ಹೆಸರುಗಳನ್ನು ಹೇಳಿದರು, ಅದಕ್ಕೆ ನಾವು ಈ ವಿಚಾರವಾಗಿ ಏನು ಮಾಡಿಕೊಂಡಿದ್ದೀರಿ, ಎಂದು ಕೇಳಿದ್ದಕ್ಕೆ, ಎಂಓಯು ಮಾಡಿಕೊಂಡಿದ್ದೆವೆಂದು ಹೇಳಿದರು, ಇದನ್ನು ಸೆಪ್ಟೆಂಬರ್ 2000ದಲ್ಲೆ ಮಾಡಿಕೊಂಡಿದ್ದಾರೆ. ಇದರ ಕಾಪಿ ನಮಗೆ ಸಿಗುತ್ತದೆಯೇ, ಎಂದು ಕೇಳಿದೆವು, ನಾವು ದಯಮಾಡಿ, ಕೃಪೆ ಮಾಡಿ ಕೊಡಿ ಎಂದು ಅವರನ್ನು ನಾವು ಕೇಳಿದೆವು, ಆಯಿತು, ನಾವು ಕಳುಹಿಸುತ್ತೇವೆಂದು ದೊಡ್ಡ ಮನಸ್ಸು ಅವರು ಮಾಡಿದರು. ಇಲ್ಲಿ ಪ್ರಶ್ನೆ ಇರುವಂಥಾದ್ದು ನಾನು ಜನವರಿಯಲ್ಲಿ ನಡೆದಂತಹ ಸಭೆಗೆ ಹೋಗದೇ ಇದ್ದಿದ್ದರೆ, ಈ ವಿಷಯವನ್ನು ನಾವು ಕೇಳದೇ ಇದ್ದಿದ್ದರೆ ಇದು ಖಂಡಿತವಾಗಿ ನಮಗೆ ಗೊತ್ತಾಗುತ್ತಿರಲಿಲ್ಲ. ಅವರನ್ನು ನಾವು ಕೇಳಿದ್ದಕ್ಕೋಸ್ಕರ ನಮಗೆ ಎಂಓಯು ಕಾಪಿಯನ್ನು ನಮಗೆ ಕಳುಹಿಸಿದರು. ಆ ಸಭೆಯಲ್ಲಿ ಅವರು ಇನ್ನೊಂದು ಮಾತನ್ನು ಹೇಳಿದರು, ತಾವು ಹೇಳಿದಿರಲ್ಲಾ, ತಮ್ಮ ರಿಸರ್ವೇಶನ್, ಒಪೀನಿಯನ್, ಆ ಪದಗಳನ್ನು, ಅಲ್ಲಿ ನಾವು ನಮ್ಮ ರಿಸರ್ವೇಶನ್, ನಮ್ಮ ವಿರೋಧ, ಎಲ್ಲವನ್ನೂ ವ್ಯಕ್ತಪಡಿಸಿದಾಗ ಚೇರ್ಮನ್‌ರವರು ಹೇಳಿದರು ಈ ರೀತಿಯಾಗಿ ಇನ್ನು ಮುಂದೆ ಆಗದ ಹಾಗೆ ಕ್ರಮ ತೆಗೆದುಕೊಳ್ಳುತ್ತೇನೆ, ಮತ್ತೆ ಆ ಎರಡೂ ಕಂಪನಿಗಳಿಂದ ವರದಿ ಬಂದ ಮೇಲೆ ಬೆಂಗಳೂರು ಶಾಸಕರುಗಳ ಜೊತೆಗೆ ಸಮಾಲೋಚನೆ ಮಾಡುತ್ತೇನೆಂದು ಹೇಳಿದರು. I will keep you informed ಎನ್ನುವ ಪದವನ್ನು ಹೇಳಿದರು. It is a commitment. Commitment of a type that was in January, 2001. ಇವತ್ತು ಆಗಸ್ಟ್ 2002ನಲ್ಲಿದ್ದೇವೆ ; ಇದುವರೆಗೂ ಆ ಕಂಪೆನಿಗಳ ಕಥೆ ಏನು ? ಆ ವಿವೆಂಡಿ ವರದಿ ಕೊಟ್ಟಿದೆಯಾ ಅಥವಾ ಇನ್ನು ಆರು ತಿಂಗಳುಗಳ ಅವಧಿಯನ್ನು ಕೇಳಿದ್ದಾರಾ ? ಇನ್ನು ಆರು ತಿಂಗಳು ಆದ ಮೇಲೆ ತನ್ನದೇ ಆದಂತಹ ವರದಿಯನ್ನು ಕೊಟ್ಟಿದೆಯಾ ? ತಾನೇ ಅಧ್ಯಯನ ಮಾಡಿದೆಯಾ ? ಈ ಯಾವ ವಿಚಾರಗಳು ನಮಗೆ ಗೊತ್ತಿಲ್ಲ. Completely we are in dark. ಅವರು ಹೇಳಲಿಲ್ಲ, ಹೇಳುವ ಸೌಜನ್ಯವನ್ನೂ ಕೂಡ ಅವರು ತೋರಿಸಲಿಲ್ಲ. ತಾವೂ ಕೂಡ ಒಂದೇ ಒಂದು ಸಾರಿ ಸಭೆಗೆ ಕರೆದಿರಿ ಆದಾದ ನಂತರ ತಾವು ನಮ್ಮನ್ನು ಕರೆದಿಲ್ಲ. ನಮಗೂ ಕೂಡ ತಮ್ಮನ್ನು ಕೇಳುವಂತಹ ಪ್ರಸಂಗ ಒದಗಿ ಬರಲಿಲ್ಲ. ಈ ಮಧ್ಯೆ ಶ್ರೀ ಜಾನ್‌ರವರು ಒಂದು ಸಾರಿ ಕರೆದಿದ್ದರು, ಶ್ರೀ ಜಾನ್‌ರವರು ನಮಗಿಂತ ಹೊಸಬರು, ಅವರನ್ನು ಕೇಳುವ ಪ್ರಸಂಗ ಬರಲಿಲ್ಲ. ಬರೀ ಲೋಕಲ್ ಗ್ರಿವೆನ್ಸೆಸ್ ಆಯಿತು ಪ್ರಶ್ನೆ ಏನೆಂದರೆ, ಇಂತಹ ಒಂದು ಪರಿಸ್ಥಿತಿಯಲ್ಲಿ ನಮಗೇನೂ ಗೊತ್ತಿಲ್ಲದಿರುವಾಗ ಅಧಿವೇಶನ ಜುಲೈ 8ನೇ ತಾರೀಖು ಆರಂಭವಾಯಿತು. ಜುಲೈ 11ನೇ ತಾರೀಖು ಈ ಸರ್ಕಾರಿ ಆದೇಶ ಬರುತ್ತದೆ. ಶ್ರೀ ಚಂದ್ರೇಗೌಡರು ತಮ್ಮ ಎಲ್ಲಾ ವಿದ್ವತ್ತನ್ನು ಉಪಯೋಗಿಸಿ ಇದು ಸರ್ಕಾರಿ ಆದೇಶ ಕೇವಲ ನೆಗೋಷಿಯೇಷನ್‌ಗೆ to go ahead with the negotiations ಎಂದೆಲ್ಲಾ ಹೇಳಿದ್ದಾರೆ ಅದನ್ನು ಒಪ್ಪುತ್ತೇವೆ ಆದರೆ ಅದಾದರೂ ಕೂಡ ನಮಗೆ ಗೊತ್ತಾಗಬೇಕಲ್ಲಾ ? ಈ ವಿವಂಡಿ ಪುಣ್ಯಾತ್ಮ ಯಾರು, ಆ ಸಿಇಒ, ಎಂಡಿ ಯಾರು, ಅವನ ಕಥೆಯೇನು ಎನ್ನುವುದು ನಮಗೆ ತಿಳಿದಿರುವಂತೆ ನಾವೂ ಕೂಡ ಹೇಳುತ್ತೇವೆ, That is not a proper company to be trusted... ಎಂದು ನಾವು ಹೇಳುತ್ತೇವೆ, ನಮ್ಮ ಹತ್ತಿರ ಮಾಹಿತಿ ಇದೆ. ಅದನ್ನು ಹೇಳುವುದಕ್ಕೂ ಕೂಡ ಅವಕಾಶ ಕೊಡದೆ ನೀವೊಂದು ಜಿಓ ಮುಖಾಂತರ go ahead to negotiate ಎಂಬ ಒಂದು ಆದೇಶವನ್ನು ಕೊಟ್ಟಿದ್ದೀರಿ. ಅಡ್ಜೆನ್‌ಮೆಂಟ್ ರೂಲ್ 69ರಲ್ಲಿ ಮಾತನಾಡಲು

ಸಭಾಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ. ಇದನ್ನೂ ಕೂಡ ನಾವು ಮಾತನಾಡದೆ ಇದ್ದಿದ್ದರೆ, ನಾವು ಈವಾಗಲೂ ಕೂಡ ಆ ಕತ್ತಲಿನಲ್ಲೇ ಅಂಧಕಾರದಲ್ಲೇ ಮುಂದುವರೆಯುತ್ತಿದ್ದೆವು, ಜನರು, ಖಾಸಗೀಕರಣ ಏನಾಯಿತೆಂದು ನಮ್ಮನ್ನು ಕೇಳುತ್ತಿದ್ದರು ; ನಾವೇನು ಉತ್ತರ ಕೊಡುವುದು ? ನಮಗಂತೂ ಏನೂ ಗೊತ್ತಿಲ್ಲ. ಪ್ರಶ್ನೆ ಏನೆಂದರೆ, ಮಾನ್ಯ ಸದಸ್ಯರಾದ ಸಿಂಧ್ಯಾರವರು ನಿನ್ನೆ ಪ್ರಸ್ತಾಪ ಮಾಡಿದಂತೆ ಬಿಡಬ್ಲ್ಯು ಎಸ್ಎಸ್ಬಿ ಆಕ್ಟ್‌ನಲ್ಲಿ ಈ ರೀತಿಯ ಖಾಸಗೀಕರಣಕ್ಕೆ ಅಥವಾ ಸಹಭಾಗಿತ್ವದಡಿಯಲ್ಲಿ ಖಾಸಗಿಯವರಿಗೆ ಒಪ್ಪಿಸುವುದಕ್ಕೆ ಪ್ರಾವಿಷನ್ ಇಲ್ಲ. ನನಗೆ ಬಿಡಬ್ಲ್ಯು ಎಸ್ಎಸ್ಬಿ ಆಕ್ಟ್‌ಗೆ ತಿದ್ದುಪಡಿ ತರಬೇಕೆಂದು ಕಳೆದ ವರ್ಷದಿಂದ ಆ ಒಂದು ಚಾಲನೆ ಇದೆ ಏನು ತಿದ್ದುಪಡಿ ತರಬೇಕೆಂಬುದನ್ನೆಲ್ಲಾ ಅವರು ಅನುಭವದ ಹಿನ್ನೆಲೆಯಲ್ಲಿ, ಅವಶ್ಯಕತೆಯ ಹಿನ್ನೆಲೆಯಲ್ಲಿ ಮಾಡಿದ್ದಾರೆ ಅಧಿವೇಶನ ಈ ತಿಂಗಳ 8ನೇ ತಾರೀಖು ಮುಗಿದು ಹೋಗುತ್ತದೆ, ಇದು ಮುಗಿದ ಮೇಲೆ ಪ್ರಾಯಶಃ ನಾವು ಸೇರುವುದು ಜನವರಿಯಲ್ಲಿ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಸೇರುತ್ತೇವೆ. ಈ ಮಧ್ಯೆ ತಾವು ಅರ್ಡಿನೆನ್ಸ್ ತರುವುದಕ್ಕೆ ಯಾರೂ ಕೂಡ ಅಡ್ಡಿಬರುವುದಕ್ಕಾಗುವುದಿಲ್ಲ, ಅರ್ಡಿನೆನ್ಸ್ ಮುಖಾಂತರ ತಿದ್ದುಪಡಿಯನ್ನು ತರಬಹುದು ; ಆಗ ನಾವು ಯಾರನ್ನೂ ಕೇಳಬೇಕು ? ಕೇಳಿ, ಈ ಸಮಸ್ಯೆ ಹೀಗೆ ಇತ್ತು, ಸರ್ಕಾರ ಸರಿಯಾಗಿ ಗಮನ ಕೊಡಲಿಲ್ಲ, ಕೊಟ್ಟಿದ್ದರೆ ಈ ಅನಾಹುತವಾಗುತ್ತಿರಲಿಲ್ಲವೆಂದು ನಾವು ಯಾರ ಹತ್ತಿರ ಕೇಳುವುದು ? ಇವತ್ತು ನಾವು ಕೇಳಿದ್ದೇವೆ ತಾವೂ ಕೂಡ ಮೇಲ್ಮನೆಯಲ್ಲಿ ಉತ್ತರ ಕೊಟ್ಟಂತೆ ನಾವು ಮುಕ್ತ ಮನಸ್ಸಿನಲ್ಲಿದ್ದೇವೆ, ಅಲ್ಲಿ ಯಾರು ಆಸಕ್ತಿ ಇದ್ದಾರೆ ಅವರನ್ನು ಕರೆಯುತ್ತೇವೆ ಇಲ್ಲಿಯೂ ಕೂಡ ವಿರೋಧ ಪಕ್ಷ ಹಾಗೂ ನಮ್ಮ ಪಕ್ಷಗಳಲ್ಲಿ ಆಸಕ್ತಿ ಇರುವವರನ್ನು ಕರೆದು ನಾವು ಮಾತನಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೀರಿ. ನಮ್ಮ ಕೋರಿಕೆ ಇಷ್ಟೆ, ತಾವು ಹೇಳಬಹುದು, ನಾವು ಫ್ರೆಂಚ್ ಸರ್ಕಾರದ ಜೊತೆ ಮಾತನಾಡುವುದಕ್ಕೆ ಅನುಕೂಲವಾಗಲೆಂದು ಈ ಆದೇಶವನ್ನು ಕೊಟ್ಟಿದ್ದೇವೆ, ಪ್ರೊಟೋಕಾಲ್ ಎನ್ನುವ ಕಾರಣವೆಲ್ಲಾ ಇದೆ. ದಯವಿಟ್ಟು ನಮ್ಮ ಭಾವನೆಗೆ ಸ್ಪಂದಿಸಿ ; ನಾವೂ ಕೂಡ ಒಂದು ಗಂಟೆಗಳ ಕಾಲ ಮಾತನಾಡಿ ನಿನ್ನೆ ಅನೇಕ ವಿಚಾರಗಳನ್ನು ಇದು ಹೇಗೆ ಆಗುವುದಿಲ್ಲವೆಂಬ ಬಗ್ಗೆ ಇಟ್ಟಿದ್ದೇವೆ. ಕಳೆದ ಮೂರು ವರ್ಷದಿಂದ ಆಸ್ಕ್ ಎಡ್ ಎನ್ನುವ ಸಂಸ್ಥೆ ಬಿಡಬ್ಲ್ಯು ಎಸ್ಎಸ್ಬಿಯನ್ನು ಅಧ್ಯಯನ ಮಾಡುತ್ತಿದೆ, I think, even before you came to power. It is a study. ಅವರೇನೂ ಹಣವನ್ನು ಕೇಳಲಿಲ್ಲ ಬಿಡಬ್ಲ್ಯು ಎಸ್ಎಸ್ಬಿಗೆ they have not become a burden. ಇವತ್ತೇನು ನಾವು ವಿವೆಂಡಿ ಹಾಗೂ ಎನ್‌ಡಬ್ಲ್ಯು ಗೆ ಸಂಸ್ಥೆಗಳಿಗೆ ಕೊಡಲು i.e., ಡಿಲಿಗೆಟೆಡ್ ಮ್ಯಾನೇಜ್‌ಮೆಂಟ್ ಕಾಂಟ್ರಾಕ್ಟ್ ಇದನ್ನು ಕೊಡಲಿಕ್ಕೆ ಹೊರಟ್ಟಿದ್ದೇವೆ ಆ ಬಗ್ಗೆ ಸ್ಪಷ್ಟವಾದ ಒಂದು ಅಭಿಪ್ರಾಯವನ್ನು ಬರಹ ರೂಪದಲ್ಲಿ ಅವರು ಕೊಟ್ಟಿದ್ದಾರೆ. ಅದು ಬಿಡಬ್ಲ್ಯು ಎಸ್ಎಸ್ಬಿಯವರಿಗೆ ಗೊತ್ತಿದೆ, ಅರ್ಬನ್ ಡೆವಲಪ್‌ಮೆಂಟ್‌ರವರಿಗೆ ಗೊತ್ತಿದೆ, ತಮಗೂ ಕೂಡ ಗೊತ್ತಿರುವ ಚಾನ್ಸಸ್ ಇದೆ. ಅವರು ಒಂದು ಮಾತನ್ನು ಹೇಳಿದ್ದಾರೆ, ಆಸ್ಕ್ ಎಡ್ ಕಂಪೆನಿಯವರು ಡಿಲಿಗೆಟೆಡ್ ಮ್ಯಾನೇಜ್‌ಮೆಂಟ್ ಬಗ್ಗೆ ಅಮೂಲಾಗ್ರವಾಗಿ ಪರಿಶೀಲಿಸಿ, ಇದರಿಂದ ಜಲಮಂಡಳಿ ಹಾಗೂ ಕರ್ನಾಟಕ ಸರ್ಕಾರಕ್ಕೆ ಯಾವರೀತಿಯ ಪರಿಸ್ಥಿತಿ ಬರುತ್ತದೆಂದು ಒಂದು ಮಾತನ್ನು ತಿಳಿಸಿದ್ದಾರೆ. This agreement or this MOU will place the BWSSB and ultimately the Government of Karnataka in difficult financial situation. On all the critical issues, this

private sector participation ie P.S.P., has a high risk rating in its current form. ಈ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಕಳೆದ ಮೂರು ವರ್ಷಗಳಿಂದ ಅಧ್ಯಯನ ಮಾಡಿರುವ ಯಾವುದೇ, ಲಾಭದ ಅಪೇಕ್ಷೆ ಇಟ್ಟುಕೊಳ್ಳದೆ ಮುಂದೆ ಬಂದಿರುವ ಸಂಸ್ಥೆಯೊಂದು ವರದಿಯನ್ನು ಇವತ್ತು ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ನಾನು ಇನ್ನೂ ಕೆಲವು ಸಂಗತಿಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ, ಕೆಲವು ಸಾರಿ ಅಧಿಕಾರಿಗಳು ಯಾವುದೋ ಮುಜುಗರಕ್ಕೆ ಒಳಗಾಗಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡದಿರಬಹುದು. ಹಿಂಜರಿಯಬಹುದು, ನಾವು ತರುವುದಕ್ಕೆ ಪ್ರಯತ್ನಪಡುತ್ತಿದ್ದೇವೆ, ಅದನ್ನು ಒಪ್ಪುವುದು ಬಿಡುವುದು ultimately it is left to you. ಆ ಹಿನ್ನೆಲೆಯಲ್ಲಿ ನಮ್ಮ ಭಾವನೆಗಳಿಗೆ ಸ್ಪಂದಿಸಿ ; ನಾವೇನೂ ಇದರಲ್ಲಿ we don't want to score a political point ಏನೋ ಒಂದು ಡಿಬೇಟಿಂಗ್ ಪಾಯಿಂಟ್ ಮಾಡಬೇಕೆಂದು ಇಷ್ಟವಿಲ್ಲ ; ಬೆಂಗಳೂರು, ಬೆಂಗಳೂರು ನಾಗರೀಕರ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದೇವೆ, ಈ ಭಾವನೆಗಳಿಗೆ ಸ್ಪಂದಿಸಿ ಅಧಿವೇಶನ ಪ್ರಾರಂಭವಾದ ಮೇಲೆ ಜುಲೈ 11ನೇ ತಾರೀಖು ತಾವೇನು ಸರ್ಕಾರಿ ಆದೇಶ ಕೊಟ್ಟಿದ್ದೀರಿ, ಯಾರು ಆದೇಶ ಕೊಡುತ್ತಾರೋ ಅದನ್ನು ಹಿಂದಕ್ಕೆ ಪಡೆಯುವ ಹಕ್ಕು ಇರುತ್ತದೆ, ದಯವಿಟ್ಟು, keep it in abeyance till you call for a meeting immediately after the 8th of August. ಮೀಟಿಂಗ್‌ನಲ್ಲಿ ನಾವು ಚರ್ಚೆ ಮಾಡಿದ ಮೇಲೆ, ಯಾವರೀತಿ ನೆಗೋಷಿಯೇಟ್ ಮಾಡುವುದೇ ತಪ್ಪು, ಈ ಎರಡು ಸಂಸ್ಥೆಗಳೊಡನೆ ಮಾಡಬೇಡಿ ಎನ್ನುವ ನನ್ನ ಅಹವಾಲನ್ನು, ನಮ್ಮ ವಿಚಾರಗಳನ್ನು ನಿಮಗೆ ತಿಳಿಸುತ್ತೇವೆ ಆಗೇನಾದರೂ ಕೂಡ ತಮಗೆ, ಇವರು ಹೇಳುವುದರಲ್ಲಿ ಹುರುಳಿದೆ, ಇವರು ಇದರಲ್ಲಿ ರಾಜಕೀಯ ಮಾಡುತ್ತಿಲ್ಲವೆಂದು ನಿಮ್ಮ ಮನಸ್ಸಿಗೆ ಅನಿಸಿದರೆ ಗಮನಕ್ಕೆ ತೆಗೆದುಕೊಳ್ಳಬಹುದು. ಅದಕೋಸ್ಕರ ನಾನು ಮತ್ತೊಮ್ಮೆ ಕೇಳಿಕೊಳ್ಳುವುದೇನೆಂದರೆ ನಾವು ನೀವು ಸೇರಿ ಚರ್ಚೆ ಮಾಡುವವರಿಗೂ ಆ ಸರ್ಕಾರಿ ಆದೇಶವನ್ನು ವಾಪಸ್ ತೆಗೆದುಕೊಳ್ಳಬೇಕು, ಅಬೀಯಾನ್ಸ್‌ನಲ್ಲಿಡಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಿನ್ನೆ ಈ ಮಹತ್ವವಾದ ವಿಷಯ ಚರ್ಚೆ ಮಾಡುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಾರಣಾಂತರಗಳಿಂದ ಇರಲಿಲ್ಲ. ಬಹಳ ಮುಖ್ಯವಾದ ವಿಚಾರವನ್ನು ನಾವು ಪ್ರಸ್ತಾಪ ಮಾಡುವಾಗ ಒಂದು ಮಾತನ್ನು ಹೇಳಿದೆವು, we are not against privatisation. ನಮ್ಮ ಪಕ್ಷದ ಪರವಾಗಿ ಹೇಳುವಾಗಿ, ನಾವೂ ಕೂಡ ಈ ರೀತಿ ಬಲ್ಕ್ ವಾಟರ್ ಅನ್ನು ತೆಗೆದುಕೊಂಡು ಬಂದು, ಬಲ್ಕ್ ವಾಟರ್ ಅನ್ನೂ ಕೂಡ 5ನೆ ಸ್ಟೇಜ್, 4ಎ 4ಬಿ ಸ್ಟೇಜ್ ಯಾವುದೇ ಸ್ಟೇಜ್‌ನಲ್ಲಿ ವಿದೇಶಿ ಕಂಪನಿಗೆ ಕೊಟ್ಟು ಬರುವ ನೀರನ್ನು ವಿತರಣೆ ಮಾಡುವುದು, ಅವರು ಹೆಚ್‌ಎಎಲ್, ಹೆಚ್‌ಎಂಟಿ, ಇನ್‌ಫೊಸಿಸ್ ಹೀಗೆ ಯಾರು ಬಲ್ಕ್ ವಾಟರ್ ಪರ್ಚೇಸರ್ಸ್ ಇರುತ್ತಾರೆ, ಬಲ್ಕ್ ವಾಟರ್ ಕೊಳ್ಳುವವರಿಗೆ ಒಂದು ನೀರಿನ ರೇಟ್ ಅನ್ನು ನಿಗದಿ ಮಾಡುವುದರ ಬಗ್ಗೆ ತೀವ್ರವಾದ ವಿರೋಧ ಜನರಲ್ಲಿ ಕಂಡುಬಂತು. ಆಗ ಆ ಕಡೆ ವಿರೋಧಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಿದ್ದ ಈಗಿನ ಆಳುವ ಪಕ್ಷದವರು ನಮ್ಮ ಮೇಲೆ ಅನೇಕ ಗುರುತರವಾದ ಆಪಾದನೆಗಳನ್ನು ಮಾಡಿದ್ದೂ ಕೂಡ ತಮಗೆ ಜ್ಞಾಪಕವಿರಬಹುದು. ಆದರೂ ಕೂಡ ನಮ್ಮ ಪಕ್ಷ ಖಾಸಗೀಕರಣಕ್ಕೆ ವಿರೋಧವಿಲ್ಲವೆನ್ನುವ ಮಾತನ್ನು ಸ್ಪಷ್ಟವಾಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ

ಚರ್ಚೆಯಾಗುವಾಗ ಅನೇಕ ಮಹತ್ತರವಾದ ವಿಚಾರಗಳನ್ನು ಮಾನ್ಯ ಸದಸ್ಯರಾದ ಸುರೇಶ್ ಕುಮಾರ್‌ರವರು ಈ ಸದನದ ಗಮನಕ್ಕೆ ತಂದಿದ್ದಾರೆ. ಈಗ ತಾವೇನು ಹೇಳಿದ್ದೀರಿ, ಕೇಂದ್ರ ಸರ್ಕಾರದ ಇನ್‌ವಾಲ್‌ಮೆಂಟ್ ಇಲ್ಲದೆ, ಅವರ ಕ್ಲಿಯರೆನ್ಸ್ ಇಲ್ಲದೆ ವಿದೇಶಿಯವರಿಂದ ಯಾವ ನೆರವನ್ನೂ ತೆಗೆದುಕೊಳ್ಳಲಾಗುವುದಿಲ್ಲ, ಟೋಟಲ್ ಗ್ರಾಂಟ್ ಶೇಕಡಾ 30ರಷ್ಟು ಪ್ರೆಂಚ್ ಗೌರ್ನಮೆಂಟ್ ಕೊಡುತ್ತಾರೆ ಉಳಿದಿದ್ದೆಲ್ಲಾ ಸಾಫ್ಟ್ ಲೋನ್ ಎಂದೆಲ್ಲಾ ಹೇಳಿದಿರಿ, ನಿನ್ನೆ ಆ ರೀತಿಯಾದ ಮಾಹಿತಿ ನಮಗೆ ಸಿಗಲಿಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ 2001 ಬಿಡಬ್ಲ್ಯುಎಸ್‌ಎಸ್‌ಬಿಯವರು ಅದರ ಬೋರ್ಡ್‌ಮೀಟಿಂಗ್ ಮಾಡಿದ ಸಂದರ್ಭದಲ್ಲಿ ಆಕ್ಟ್ ಅನ್ನು ತಿದ್ದುಪಡಿ ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. 2001 ಫೆಬ್ರವರಿಯಲ್ಲಿ ಕೇಳಿರುವುದನ್ನು 2002 ಜುಲೈನ ಒಳಗಡೆ ಆ ಆಕ್ಟ್ ಅನ್ನು ತಿದ್ದುಪಡಿ ಮಾಡಬಹುದಾಗಿತ್ತು. 1999ರಲ್ಲಿ ತಾವೇನು ಕರ್ನಾಟಕ ಹಾಗೂ ವಿಶೇಷವಾಗಿ ಬೆಂಗಳೂರಿನ ನಾಗರೀಕರಿಗೆ ಅಧಿಕಾರಕ್ಕೆ ಬರುವಾಗ ಏನು ಭರವಸೆಯನ್ನು ಕೊಟ್ಟಿದ್ದೀರಿ ಅದನ್ನು ಈಡೇರಿಸಲು, ಮೊನ್ನೆ ಸೆಪ್ಟೆಂಬರ್‌ನಲ್ಲಿ ಮಹಾನಗರಪಾಲಿಕೆ ಚುನಾವಣೆಯಲ್ಲಿ ಕೊಟ್ಟಂತಹ ಭರವಸೆಯನ್ನು ಈಡೇರಿಸುವುದಕ್ಕೆ ಒಂದೂವರೆ ವರ್ಷದಿಂದ ಸಾಕಷ್ಟು ಸಮಯವಿತ್ತು ಈ ಆಕ್ಟ್ ಅನ್ನು ತಿದ್ದುಪಡಿ ಮಾಡಬಹುದಾಗಿತ್ತು, ಈಗಲೂ ಕೂಡ ಮಾಡಬಹುದು ತಮಗೆ ಬಹುಮತವಿದೆ ಅದು ಬೇರೆ ಪ್ರಶ್ನೆ. ತಾವೇ ಹೇಳಿದ್ದೀರಿ ನಾನು ಟ್ರಾನ್ಸ್‌ಫೆರೆನ್ಸಿಯಲ್ಲಿ ಬಹಳ ನಂಬಿಕೆ ಇಟ್ಟುಕೊಂಡಿರುವವನು, ಮತ್ತೆ ಅಫೊರ್ಡೇಬಲ್ ಕಾಸ್ಟ್‌ನಲ್ಲಿ ಇದಾಗಬೇಕೆನ್ನುವ ಎರಡು ವಿಚಾರಗಳನ್ನು ನಾವು ಹೇಳುವುದನ್ನೇ ತಾವು ಹೇಳಿದ್ದೀರಿ. ನಾವು ಕೇಳುವುದೇನೆಂದರೆ, ತಾವೇನು ಕೌನ್ಸಿಲ್‌ನಲ್ಲಿ ನಾವು ಕರೆದು ಮಾತನಾಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ, ವಿಶೇಷವಾಗಿ ನಮ್ಮ ಕಡೆಯಿಂದ ಬಹಳ ಜನ ಸದಸ್ಯರುಗಳು ಮಾತನಾಡಿದರು ಬೆಂಗಳೂರಿನ ಮಾನ್ಯ ಸದಸ್ಯರಾದ ಶ್ರೀ ಸುರೇಶ್ ಕುಮಾರ್, ಶ್ರೀ ಸೋಮಣ್ಣ, ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು, ಶ್ರೀ ಬಚ್ಚೇಗೌಡರು ಇವರೆಲ್ಲಾ ಬೆಂಗಳೂರಿನಲ್ಲೇ ವಾಸವಾಗಿದ್ದು ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಹೋರಾಟ ಮಾಡುತ್ತಿರುವ ಸದಸ್ಯರುಗಳು, ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಕೇಳತಕ್ಕಂಥಾದ್ದು ಇಷ್ಟೇ. ಈ ನೋಟಿಫಿಕೇಶನ್‌ಅನ್ನು ಹೊರಡಿಸಲು ಆಕ್ಟ್‌ನಲ್ಲಿ ಪ್ರಾವಿಷನ್ ಇಲ್ಲ. This is an illegal notification which has been issued. ಚರ್ಚೆ ಮಾಡುವವರೆಗಾದರೂ ಅದನ್ನು ಅಬೇಯನ್ಸ್‌ನಲ್ಲಿ ಇಡಬೇಕು ಎನ್ನುವುದು ನಮ್ಮ ಒತ್ತಾಯ. ಇದನ್ನು ನಾವು ಒಂದು ಪ್ರೆಸ್ಟೀಜ್ ಇಷ್ಯೂವನ್ನಾಗಿ ಮಾಡಿಕೊಳ್ಳಲಿಲ್ಲ. ಇದರ ಬಗ್ಗೆ ಕನಿಷ್ಟ ಪಕ್ಷ ಒಂದು ಭರವಸೆಯನ್ನಾದರೂ ಕೊಡಿ ಎಂದು ತಾವು ಬರುವ ಮೊದಲು ಸಭಾಧ್ಯಕ್ಷರ ಮೂಲಕ ಕೇಳಿದೆವು. You give us an assurance that you will reconsider this. ಬಾಕಿ ಇನ್ನೇನನ್ನೂ ನಾವು ಕೇಳುತ್ತಿಲ್ಲ. We will say whatever we want to say. If you still want to go ahead. ಅದು ನಿಮಗೆ ಸಂಬಂಧಪಟ್ಟಿದ್ದು. ನಾವು ಅದಕ್ಕೆ ಅಡ್ಡಿ ಬರಲು ಆಗುವುದೂ ಇಲ್ಲ. ನೀವು ಮಾಡಿರುವ ಈ ನೋಟಿಫಿಕೇಷನ್‌ಅನ್ನು ಅಬೇಯನ್ಸ್‌ನಲ್ಲಿಟ್ಟು, ನಮ್ಮನ್ನೆಲ್ಲಾ ಮೀಟಿಂಗ್‌ಗೆ ಕರೆದು ಇದನ್ನು ರೀ-ಕನ್ಸಿಡರ್ ಮಾಡುತ್ತೇವೆ ಎನ್ನುವ ಬಗ್ಗೆ ಒಂದು ಭರವಸೆ ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಟ್ರಾನ್ಸ್‌ಫರೆನ್ಸಿಯಲ್ಲಿ ನನಗೆ ನಂಬಿಕೆ ಇದೆ ಎಂದು ತಾವು ಹೇಳಿದ್ದೀರಿ, ಆ ದೃಷ್ಟಿಯಿಂದ ಇದನ್ನು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಸನ್ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಸಭೆಯಲ್ಲಿ ಇಲ್ಲದಿದ್ದರೂ ಸಹ, ಇದರ ಪ್ರಾಮುಖ್ಯತೆಯನ್ನು ಅರಿತುಕೊಂಡು ಇವತ್ತು ಬಂದು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಖಾಸಗಿ ಕಂಪನಿಗಳ ಸಹಭಾಗಿತ್ವಯಾವುದಕ್ಕೇ, ಎಂತಿಷ್ಟು ಅನ್ನುವುದಕ್ಕಿಂತ ಹೆಚ್ಚಾಗಿ ಎಂಟು ತಿಂಗಳ ಹಿಂದೆ ಜಲಮಂಡಳಿಯವರು ದರವನ್ನು ಜಾಸ್ತಿ ಮಾಡಿದಾಗ, ಅದು ಶೇಕಡ ನೂರರಷ್ಟು ಹೆಚ್ಚಾಗಿದೆ ಎನ್ನುವುದನ್ನು ನಾನು, ರಾಮಲಿಂಗಾರೆಡ್ಡಿಯವರು ಮತ್ತು ಇತರ ಕೆಲವು ಶಾಸಕರು ಹೋಗಿ ಅವರನ್ನು ಭೇಟಿಯಾಗಿ ಇದರ ಬಗ್ಗೆ ಮನವರಿಕೆ ಮಾಡಿಕೊಟ್ಟಾಗ, ಅಧಿಕಾರಿಗಳು ಎಷ್ಟು ಅಗತ್ಯವಿದೆಯೋ ಅದಕ್ಕಿಂತ ಹೆಚ್ಚು ದರವನ್ನು ಏರಿಸಿದ್ದಾರೆ ಎಂದು ಮನವರಿಕೆ ಮಾಡಿಕೊಟ್ಟಾಗ, ಸನ್ಮಾನ್ಯ ಶ್ರೀ ಬಿ.ಕೆ. ಚಂದ್ರಶೇಖರ್‌ರವರನ್ನು ಕರೆದು, ಎಲ್ಲಾ ಶಾಸಕರ ಸಭೆಯನ್ನು ಕರೆದು, ಒಂದು ಸ್ಟಾಟೆಜಿಯನ್ನು ಪರ್ಕ್ಯುಟ್ ಮಾಡಿ ವಿದ್ಯುಚ್ಛಕ್ತಿ ಮತ್ತು ಮೇಂಟನನ್ಸ್‌ಗೆ ಎಷ್ಟು ಅವಶ್ಯಕತೆ ಇದೆಯೋ ಅದಕ್ಕಿಂತ ಒಂದು ರೂಪಾಯಿಯನ್ನೂ ಜಾಸ್ತಿ ಮಾಡಬಾರದು ಎಂದು ತಿಳಿಸಿ, ಹಿಂದೆ ಮಾಡಿದಂಥ ಆದೇಶವನ್ನು ತಕ್ಷಣವೇ ರದ್ದು ಮಾಡಿ ಹೊಸ ಆದೇಶವನ್ನು ಮಾಡಿದರು. ನಗರದ ನಾಗರೀಕರಿಗೆ ಜಲಮಂಡಳಿಗೆ ಹಣವನ್ನು ಕಟ್ಟಲು ಯಾವುದೇ ರೀತಿಯಲ್ಲಿ ಕಷ್ಟವಾಗಬಾರದು ಎನ್ನು ದೃಷ್ಟಿಯಿಂದ ಅದನ್ನು ಮಾಡಿದರು. ಅದಾದ ಮೇಲೆ, ಪುನಃ ಒಂದೂವರೆ-ಎರಡು ತಿಂಗಳ ಹಿಂದೆ ವಿದ್ಯುಚ್ಛಕ್ತಿಯ ದರವನ್ನು ಜಾಸ್ತಿ ಮಾಡಿದಾಗ ಅದಕ್ಕನುಗುಣವಾಗಿ ದರವನ್ನು ಏರಿಸಿದರು. ಚುನಾವಣೆಯ ಸಂದರ್ಭದಲ್ಲಿ ನಗರದ ನಾಗರೀಕರಿಗೆ ಕೊಟ್ಟಂಥ ಭರವಸೆಗಳು ಮತ್ತು ಈ ನಗರದ ಬೆಳವಣಿಗೆಯ ದೃಷ್ಟಿಯಿಂದ ಇದನ್ನು ಯಾವ ರೀತಿ ಮುಂದಕ್ಕೆ ಕೊಂಡೊಯ್ಯಬೇಕು ಎನ್ನುವ ದೃಷ್ಟಿಕೋನದಿಂದ ಕೆಲವಾರು ಗುರುತರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಮತ್ತು ಜಲಮಂಡಳಿಯನ್ನು ಖಾಸಗೀಕರಣಗೊಳಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ ಎಂದು ಇದೀಗ ತಾನೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ತಿಳಿಸಿದರು. ಜಲಮಂಡಳಿಯವರು ಸುಮಾರು 60-80 ವರ್ಷಗಳಷ್ಟು ಹಳೆಯ ಪೈಪುಗಳನ್ನು ತೆಗೆದು ಹೊಸ ಪೈಪುಗಳನ್ನು ಅಳವಡಿಸುವ ಕೆಲಸವನ್ನು ಪ್ರಾರಂಭ ಮಾಡಿದ್ದು, ಸುಮಾರು 45 ಕಿ.ಮೀ. ವರೆಗೆ ಹೊಸ ಪೈಪುಗಳನ್ನು ಅಳವಡಿಸುತ್ತಿದ್ದಾರೆ. ವಾಟರ್ ಆದಾಲತ್ ಅನ್ನು ಮಾಡುತ್ತಿದ್ದಾರೆ, ವಾಟರ್ ಆಡಿಟ್ ಮಾಡಿದ್ದಾರೆ, ಗಣಕೀಕರಣ ಗೊಳಿಸಿದ್ದಾರೆ. ನೀರು ಸೋರುವಿಕೆಯನ್ನು ತಡೆಗಟ್ಟಲು ಅಲಸೂರು ವಿಭಾಗದಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. 1995-96ರಲ್ಲಿ ಇದ್ದ 1,46,100 ಎಂಎಲ್‌ಡಿ ನೀರು ಇವತ್ತು ಅಧಿಕಾರಿಗಳ ಜಾಗರೂಕತೆಯಿಂದ ಅದೇ ನೀರು 1,68,564 ಎಂಎಲ್‌ಡಿಗೆ ಜಾಸ್ತಿಯಾಗಿದೆ. 119.98 ಕೋಟಿ ರೂ. ಇದ್ದಂಥ ರೆವಿನ್ಯೂ ಇವತ್ತು 230.37 ಕೋಟಿರೂಗಳಿಗೆ ಏರಿದೆ. ಒಂದು ಸಾವಿರ ಲೀಟರ್‌ಗೆ 7.80 ರೂಪಾಯಿಗಳಷ್ಟಿದ್ದ ಕಾಸ್ಟ್ ಆಫ್ ರೆಕವರಿ ಇವತ್ತು 13.61 ರೂಪಾಯಿ ಆಗಿದೆ. ಇಷ್ಟೆಲ್ಲವನ್ನೂ ಹೇಳಿ, ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಖಾಸಗಿ ಸಹಭಾಗಿತ್ವದ ಈ ಎರಡು ಕಂಪನಿಗಳನ್ನೇ ಗುರುತಿಸಿ, ಅವುಗಳ ಜೊತೆ ಎಂಒಯು ಮಾಡಿಕೊಳ್ಳಲು ಆಧಾರವೇನು ? ಭಾರತ ಸರ್ಕಾರ ಇದಕ್ಕೆ ಸ್ಪಂದಿಸುತ್ತಿದೆ ಎನ್ನುವ ದೊಡ್ಡ

ಮಾತನ್ನೂ ಹೇಳಿದ್ದಾರೆ. ಆದರೆ ನಮ್ಮ ದೇಶದಲ್ಲಿರುವ ಐದು ದೊಡ್ಡ ದೊಡ್ಡ ನಗರಗಳನ್ನು ಬಿಟ್ಟು ಈ ಫ್ರೆಂಚ್ ಕಂಪನಿಯವರು ಬೆಂಗಳೂರು ನಗರಕ್ಕೇ ಬರತಕ್ಕಂಥ ಉದ್ದೇಶವಾದರೂ ಏನು ?

ಅಧ್ಯಕ್ಷರು : ಸೋಮಣ್ಣನವರೇ, ನಿನ್ನೆ ಹೇಳಿದ್ದೀರಲ್ಲಾ. ಈಗ ಮತ್ತೆ ಅದನ್ನೇ ರಿಪೀಟ್ ಮಾಡುತ್ತಿದ್ದೀರಿ. ನಿನ್ನೆ ಸುಮಾರು 3-4 ಗಂಟೆಗಳ ಕಾಲ ಚರ್ಚೆಯಾಯಿತು. ಈ ರೀತಿ ಹೇಳಿದರೆ ಮತ್ತೆ 3-4 ಗಂಟೆಗಳಾಗುತ್ತವೆ. ಆದ್ದರಿಂದ ನೀವು ಹೇಳುವುದನ್ನು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ವಿ. ಸೋಮಣ್ಣ : ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳುವುದು ಇಷ್ಟೇ, ಇದನ್ನು ಮಾಡುವುದರಿಂದ ಇದಕ್ಕೆ ಬೇಕಾಗುವಂಥ ಹಣದ ಹೊರೆಯನ್ನು ನಾಗರೀಕರ ಮೇಲೆ ಹೊರಿಸತಕ್ಕಂಥಾದ್ದು ಆಗುತ್ತದೆ. ಇವತ್ತು ಇರುವ ನೀರಿನ ದರದ 2-3 ಪಟ್ಟು ಜಾಸ್ತಿಯಷ್ಟು ಹಣ ಸಾಮಾನ್ಯ ಜನರ ಮೇಲೆ ಈ ಖಾಸಗೀಕರಣದಿಂದ ಹೊರೆ ಬೀಳುತ್ತದೆ. ಹಿಂದೆ ದರ ಜಾಸ್ತಿಯಾದಾಗ, ತಾವು ಅದನ್ನು ತಕ್ಷಣವೇ ಕಡಿಮೆ ಮಾಡತಕ್ಕಂಥ ಕೆಲಸವನ್ನು ಮಾಡಿದಿರಿ. ಅದೇ ರೀತಿ ಈಗಲೂ ತಾವು ಆಲೋಚನೆಯನ್ನು ಮಾಡಬೇಕು. ಎರಡು ಡಿವಿಷನ್‌ಗಳಿಗೆ ತಾವು ಖರ್ಚು ಮಾಡಬೇಕೆಂದಿರುವ 585 ಕೋಟಿ ರೂಪಾಯಿಗಳ ಹೊರೆ ಸಾರ್ವಜನಿಕರ ಮೇಲೆ ಬಿದ್ದರೆ ಅದರಿಂದ ಜನರಿಗೆ ಖಂಡಿತವಾಗಿ ತೊಂದರೆಯಾಗುತ್ತದೆ. ಇವತ್ತು ಇರುವ ದರಕ್ಕಿಂತ ನೂರುಪಟ್ಟು ಜಾಸ್ತಿಯಾಗುತ್ತದೆ. ಈಗಾಗಲೇ ಸನ್ಯಾಸ್ಯ ಸಿಂಧ್ಯಾರವರು, ಶ್ರೀ ಸುರೇಶ್ ಕುಮಾರ್‌ರವರು, ಮಾನ್ಯ ಜಗದೀಶ್ ಶೆಟ್ಟರ್‌ರವರು ಎಲ್ಲವನ್ನೂ ಹೇಳಿದ್ದಾರೆ. ಇದುವರೆಗೆ ತಾವು ಯಾವ ರೀತಿ ಮುಕ್ತ ಮನಸ್ಸಿನಿಂದ ಚರ್ಚೆಯನ್ನು ಮಾಡಿದ್ದೀರಿ, ಅದೇ ರೀತಿ ಇಲ್ಲೂ ಸಹ, ಎಲ್ಲವನ್ನೂ ತೀರ್ಮಾನ ಮಾಡುವ ಮೊದಲು ನಮ್ಮ ಜೊತೆ ಚರ್ಚೆ ಮಾಡಬೇಕು. ಬೆಂಗಳೂರಿನ ಬಗ್ಗೆ ತಾವು ತಮ್ಮದೇ ಆದಂಥ ಭಾವನೆಗಳನ್ನು ಇಟ್ಟುಕೊಂಡಿದ್ದೀರಿ. ಇದಕ್ಕೆ ಜನಸಾಮಾನ್ಯರೂ ಸ್ಪಂದಿಸಬೇಕಾಗಿರುವುದರಿಂದ, ತಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರೆಗೆ ಈ ಆದೇಶವನ್ನು ತಾತ್ಕಾಲಿಕವಾಗಿ ತಡೆಮಾಡಬೇಕು ಎಂದು ನಾನು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಬಚ್ಚೇಗೌಡರೇ, ನಿಮ್ಮ ನಾಯಕರು ಮಾತನಾಡಿದ್ದಾರೆ. ನೀವು ಮಾತನಾಡಿದರೆ ಪುನಃ ನಿನ್ನೆ ಹೇಳಿದ್ದನ್ನೇ ಹೇಳುತ್ತೀರಿ. ನಿನ್ನೆ ದೀರ್ಘವಾದ ಚರ್ಚೆಯಾಗಿದೆ. ಮತ್ತೆ ಮಾತನಾಡಿದವರೇ ಮಾತನಾಡುವುದು ಎಂದರೆ ಹೇಗೆ ? ಆಯಿತು, ಬೇಗನೆ ಮುಗಿಸಿ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಸನ್ಯಾಸ್ಯ ಅಧ್ಯಕ್ಷರೇ, ನಿನ್ನೆ ನಾವು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ. ಇವತ್ತು ಅವರು ಬಂದಿದ್ದಾರೆ. ಸದುದ್ದೇಶದಿಂದ, ವೈಜ್ಞಾನಿಕವಾಗಿ ನೀರು ವಿತರಣೆಯ ಕಾರ್ಯವನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ ಅದಕ್ಕೆ ನಮ್ಮ ಸಹಮತವಿದೆ. ಆದರೆ ಇವೊತ್ತು ಏನು ಈ ಅವೈಜ್ಞಾನಿಕವಾಗಿ ತಂದಿರತಕ್ಕಂಥ ಈ ನೋಟಿಫಿಕೇಷನ್‌ಅನ್ನು ವಾಪಸ್ಸು ಪಡೆಯಬೇಕು ಎನ್ನುವುದು ನಮ್ಮ ಒತ್ತಾಯ. ನಮ್ಮನ್ನು ಕರೆಸಿ ಚರ್ಚೆ ಮಾಡಿ ಮತ್ತು ಸಾರ್ವಜನಿಕರ ಅಹವಾಲುಗಳನ್ನು ಕೇಳಿ ನಂತರ ಇದನ್ನು ಮಾಡುತ್ತೇನೆ ಎಂದು ಈಗಾಗಲೇ ಮೇಲ್ಮನೆಯಲ್ಲಿ ಹೇಳಿದ್ದಾರೆ. ಇದನ್ನು ರೀಕನ್ಸಿಡರ್ ಮಾಡಲು ಮುಕ್ತಮನಸ್ಸಿನಿಂದ ಇದ್ದೇನೆ ಎಂದು ಹೇಳಿದ್ದಾರೆ. ಇಲ್ಲಿ ನಮಗೆ ಅಷ್ಟು ಹೇಳಿದರೆ ಸಾಕು. ಈ ಅಧಿವೇಶನ ಮುಗಿಯುವ ಎಂಟನೇ ತಾರೀಖಿನೊಳಗಾಗಿ ಅಥವಾ ಇನ್ನೂ ಹತ್ತಿರದ ಸಮಯವನ್ನು

ಕೊಟ್ಟು ನಮ್ಮನ್ನು ಕರೆದು ಚರ್ಚೆ ಮಾಡಬೇಕು. ಆ ಬಗ್ಗೆ ಹಿರಿಯ ಸಚಿವರಾದ ಚಂದ್ರೇಗೌಡರು ನಿನ್ನೆ ಹೇಳಿದ್ದರು ; ಸದನ ನಡೆಯುವಾಗಲೇ ನೋಟಿಫಿಕೇಷನ್ ತರುವಂಥಾದ್ದು ಅಂದರೆ ಅಧಿವೇಶನ ಕಳೆದ 8ನೇ ತಾರೀಖು ಪ್ರಾರಂಭವಾಗಿದ್ದು, 11ನೇ ತಾರೀಖು ನೋಟಿಫಿಕೇಷನ್ ಆಗಿದೆ. ಸರ್ಕಾರ ತಂದಿರುವ ನೋಟಿಕೇಷನ್ ತಪ್ಪು ಎಂದು ನಾವು ಹೇಳುವಂಥಾದ್ದು, ಆಕ್ಟ್‌ನಲ್ಲಿ ಇದಕ್ಕೆ ಅವಕಾಶವಿಲ್ಲ ಎಂದು ಹೇಳಿದೆವು. ಅಮೆಂಡ್‌ಮೆಂಟ್ ಮೂಲಕ ಇದನ್ನು ತಂದಿರುವಂಥಾದ್ದು it is only to negotiate ಎಂದು ಮಾನ್ಯ ಸಚಿವರು ಹೇಳಿದರು. ಯಾವುದೇ ನೆಗೋಷಿಯೇಷನ್‌ಗಳಾಗಬಹುದು ಅಥವಾ ತೀರ್ಮಾನಗಳನ್ನಾಗಲೀ ಮಾಡಿ ಎರಡು ಫ್ರೆಂಚ್ ಸಂಸ್ಥೆಗಳಿಗೆ ಕೊಡುವಂಥಾದ್ದು ತಪ್ಪು. ಅದನ್ನು ವಾಪಸ್ಸು ಪಡೆದು, ಈ ವಿಚಾರ ನಿರ್ಧಾರ ವಾಗುವವರೆಗೆ ತಡೆಹಿಡಿಯುವಂಥಾದ್ದು ಆಗಬೇಕು ಎಂದು ನಾವು ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಹಿಂದೆ, ವಿದ್ಯುಚ್ಛಕ್ತಿ ಉತ್ಪಾದನೆಗೆ ಸಂಬಂಧಿಸಿದಂತೆ ಎನ್ರಾನ್, ಕೊಜೆಂಟ್ರಿಕ್ಸ್ ಸಂಸ್ಥೆಗಳವರು ಬಂದಿದ್ದರು. ಎಂಓಯು ಆದಾಗ ಅವರು ನಾವು 3-4 ರೂಪಾಯಿಗಳಿಗೆ ಕೊಡುತ್ತೇವೆ ಎಂದು ಕೋಟ್‌ಮಾಡಿದರು. ಅದು ಹೆಚ್ಚು ಎಂದು ನಾವು ಒಪ್ಪಲಿಲ್ಲ. ಇವತ್ತು 1000 ಲೀಟರ್‌ಗೆ 13 ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದಾರೆ. ಇತ್ತೀಚೆಗೆ ಎರಡು ಸಲ ಜಲಮಂಡಳಿಯವರು ನೀರಿನ ದರವನ್ನು ಹೆಚ್ಚಿಸಿದ್ದರಿಂದ 400-500 ರೂಪಾಯಿಗಳನ್ನು ಕೊಡುತ್ತಿದ್ದೇವೆ. ತಾವು ಇದನ್ನು ಖಾಸಗಿ ಸಂಸ್ಥೆಗಳಿಗೆ ಕೊಟ್ಟರೆ ಮುಂದೆ ಅವರು ಟ್ಯಾರಿಫ್‌ಅನ್ನು ಇನ್ನೂ ಹೆಚ್ಚು ಹಾಕಬಹುದು. Our Board is 100% capable to handling all these situations. ಫಿಲ್‌ಫರೇಜಸ್ ಇದೆ, ಶೇಕಡ 40ರಷ್ಟು ಲೀಕೇಜಸ್ ಇದೆ, ಇವುಗಳನ್ನು ಸರಿಪಡಿಸಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. Our Board is equally capable of handling this. ಆದ್ದರಿಂದ ಮಂಡಳಿಯವರಿಗೇ ತಾವು ಹಣ ಕೊಡಿ. ಈ ಎರಡು ಫ್ರೆಂಚ್ ಸಂಸ್ಥೆಗಳಿಗೆ ಏನು 500 ಕೋಟಿ ರೂಪಾಯಿಗಳಷ್ಟು ಕೊಡುತ್ತೀರಿ ಅದರ ಅರ್ಧದಷ್ಟು ಹಣವನ್ನು ಕೊಟ್ಟರೆ ಎಲ್ಲಾ ವ್ಯವಸ್ಥೆಗಳನ್ನು ಮಂಡಳಿಯವರೇ ಮಾಡುತ್ತಾರೆ ಎಂದು ಮಾನ್ಯ ಸೋಮಣ್ಣನವರು ಹೇಳಿದ್ದಾರೆ.

1.40 ಪಿಎಂ

ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳದೆ, ಈ ನೋಟಿಫಿಕೇಷನ್‌ಅನ್ನು ತಡೆಹಿಡಿಯಬೇಕು. ಇಷ್ಟು ವರ್ಷ ನಾವು ಕಷ್ಟದಲ್ಲಿದ್ದೇವೋ ಒಳ್ಳೆಯದರಲ್ಲಿ ಇದ್ದೇವೋ ಎನ್ನುವ ಅರ್ಥವಲ್ಲ, ಏನೋ ಆಗಿಬಿಡುವುದಿಲ್ಲ, ಆಕಾಶ ಕಳಚಿಬೀಳುವುದಿಲ್ಲ ಎಂದು ಹೇಳಬಹುದು. ಈ 15 ದಿವಸವಾಗಲೀ ತಿಂಗಳಾಗಲೀ ; ಇಲ್ಲದಿದ್ದರೆ ಈ ಸರ್ಕಾರದ ಮೇಲೆ ನಾನಾ ರೀತಿಯ ಅನುಮಾನಗಳು ಉಂಟಾಗುತ್ತವೆ. ಅನುಮಾನಕ್ಕೆ ಅವಕಾಶ ಕೊಡದೆ ಮುಕ್ತ ಮನಸ್ಸಿನಿಂದ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ "I will have a very open mind" ಎಂದು, ಏನು ಅವರು ಪಾರದರ್ಶಕತೆ ಬಗ್ಗೆ ಹೇಳುತ್ತಿದ್ದಾರೆ, ಟ್ರಾನ್ಸ್‌ಫರೆನ್ಸಿ ಎಂದು ಹೇಳುತ್ತಿದ್ದಾರೆ ಅಥವಾ ಇದಕ್ಕೆ ಗ್ಲೋಬಲ್ ಟೆಂಡರ್ ಕರೆದಿದ್ದಾರೆಯೇ ? ಯಾವ ಟೆಂಡರ್ ಮೂಲಕ ಈ ಕಂಪನಿಗೆ ಕೊಟ್ಟರು ? ಜಾಗತಿಕ ಟೆಂಡರ್ ಕರೆದಿಲ್ಲ. ನಾವು ಮಾಡುತ್ತೇವೆಂದು ಯಾರೋ ಬಂದಿದ್ದಾರೆ, ಬಂದಿದ್ದವರನ್ನು ಇಲ್ಲಿಗೆ ಆಹ್ವಾನ ಮಾಡಿರತಕ್ಕಂಥದ್ದು ಆಗಿದೆ. ಆದ್ದರಿಂದ ಈ

ನೊಟಿಫಿಕೇಷನ್‌ಅನ್ನು ವಾಪಾಸ್ಸು ಪಡೆಯಬೇಕು. ನೋಟೀಫಿಕೇಷನ್ ರದ್ದು ಪಡಿಸಬೇಕು, ಇದರ ಬಗ್ಗೆ ನಗರದಲ್ಲಿರತಕ್ಕಂಥ ಶಾಸಕರು, ಮಂತ್ರಿಗಳು, ನಮ್ಮೆಲ್ಲರ ಜೊತೆ ಚರ್ಚೆಯಾಗಬೇಕು, ಆ ನಂತರ ತೀರ್ಮಾನ ತೆಗೆದುಕೊಳ್ಳಲಿ ಸ್ವಾಮಿ. ನಮ್ಮನಾಯಕರು ಹೇಳಿದ ಹಾಗೆ ಖಾಸಗೀಕರಣಕ್ಕೆ ನಮ್ಮ ವಿರೋಧವಿಲ್ಲ. ಆದರೆ ಇದು ವ್ಯವಸ್ಥೆ ರೂಪದಲ್ಲಿ ಆಗಬೇಕು. ಕಾನೂನು ಚೌಕಟ್ಟಿನಲ್ಲಿ ಆಗಬೇಕೆನ್ನುವ ಉದ್ದೇಶ ಅಷ್ಟೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ಜಾಸ್ತಿ ಹೊತ್ತು ಮಾತನಾಡುವುದಿಲ್ಲ. ದಯಮಾಡಿ ಅವಕಾಶ ಕೊಡಿ. ಬೆಂಗಳೂರು ಶಾಸಕರಾಗಿ ನಾವು ಇದ್ದು ಏನು ಪ್ರಯೋಜನ ? ಒಂದು ವರ್ಷದ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಒಂದೇ ಒಂದು ಸಲ ಮೀಟಿಂಗ್ ಕರೆದು ಏನು ಸಮಸ್ಯೆ ಎಂದು ಕೇಳಿದರು. ಅದು ಮುಗಿದು ಹೋಯಿತು. ನಂತರ ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಏನೂ ಮಾತನಾಡಲಿಲ್ಲ. ಇವತ್ತು ಬೆಂಗಳೂರಲ್ಲಿ ಈ ಬಿಲ್ ಬಗ್ಗೆ ನಮಗೆ ಒಂದು ವಿಷಯವನ್ನೂ ತಿಳಿಸಿದಿಲ್ಲ. ಇದುವರೆಗೂ ನಮಗೆ ಗೊತ್ತೇ ಇಲ್ಲ. ಜಲಮಂಡಳಿಯನ್ನು ಖಾಸಗೀಕರಣ ಮಾಡಬೇಕಾದರೆ ಕೊನೆಯ ಪಕ್ಷ ಬೆಂಗಳೂರು ಶಾಸಕರಿಗಾದರೂ ಸ್ವಲ್ಪ ಇನ್‌ಫಾರ್ಮೇಷನ್ ಕೊಡಬಹುದಾಗಿತ್ತಲ್ಲಾ. ಏನೂ ಮಾಡಲಿಲ್ಲ. ಎರಡನೆಯದು, ಕ್ರೈಮ್ ಬೆಂಗಳೂರಿನಲ್ಲಿ ಜಾಸ್ತಿಯಾಗಿದೆ. ಮಾನ್ಯ ಸಚಿವರಿಂದ ಖರ್ಗೆಯವರು ಮೀಟಿಂಗ್ ಕರೆಯಲಿಲ್ಲ.

(ಗೊಂದಲ)

ಅಧ್ಯಕ್ಷರು : ಈಗ ಚರ್ಚೆಯಾಗುತ್ತಿರುವ ವಿಷಯಕ್ಕೂ ಕ್ರೈಮ್‌ಗೂ ಸಂಬಂಧ ಇಲ್ಲ. ಸುಬ್ಬಾರೆಡ್ಡಿಯವರ ಭಾಷಣವನ್ನು ರೆಕಾರ್ಡ್ ಮಾಡಿಕೊಳ್ಳಬೇಡಿ. Don't take down.

(ಗೊಂದಲ)

SRI K.N. SUBBA REDDY : You kept us in dark ; you have not informed about this .....

ಅಧ್ಯಕ್ಷರು : ಸಬ್ಜೆಕ್ಟ್ ಮಾರ್ಪಾಡು ಮಾಡಿದರೆ ಹೀಗೇ ಆಗುವುದು. ಹೇಳಿದ್ದನ್ನೇ ಎಷ್ಟು ಸಲ ರಿಪೀಟ್ ಮಾಡುತ್ತೀರಿ ? ಸರ್ಕಾರದವರು ಉತ್ತರ ಕೊಡುವುದಿದ್ದರೆ ಕೊಡಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಅಗತ್ಯವಾಗಿ ಹೇಳೋಣ. ಶ್ರೀ ಸುಬ್ಬಾರೆಡ್ಡಿಯವರು ಕ್ರೈಮ್ ವಿಚಾರವಾಗಿ ಮಾತನಾಡಿದರು. ಅದು ಮೊಸರಿನಲ್ಲಿ ಕಲ್ಲು ಹುಡುಕಿದ ಹಾಗೆ. ಅದಕ್ಕೂ ಇದಕ್ಕೂ ಅರ್ಥಾತ್ ಸಂಬಂಧವಿಲ್ಲ. ಏಕೆ ಹೇಳಿದರೋ ಗೊತ್ತಿಲ್ಲ ನನಗೆ. ಬಹಳ ಗಂಭೀರವಾದಂಥ ವಿಚಾರಗಳನ್ನು ತಿಳಿದಂಥ ಸದಸ್ಯರು ಬಹಳ ಗಂಭೀರವಾಗಿ ವಿಚಾರಗಳನ್ನು ಮಂಡಿಸಿದ್ದಾರೆ. ನಾನು ಹೇಳುವುದು ಅದನ್ನೇ, ತಿಳಿದಂಥ ಸದಸ್ಯರು ಬಹಳ ಗಂಭೀರವಾಗಿ ವಿಚಾರಗಳನ್ನು ಮಂಡಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಲ ಮಂಡಳಿಯನ್ನು ಖಾಸಗೀಕರಣ ಮಾಡುತ್ತಿದ್ದೇವೆಂದು ಅವರು ಹೇಳಿದರು. ಅಕ್ಟೋಬರ್ 5ನೇ ತರೀಖು ಹಿಂದಿನ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿತ್ತೋ, ಆ ತೀರ್ಮಾನವನ್ನೂ ಕೂಡ ಜಲಮಂಡಳಿಯನ್ನು ಖಾಸಗೀಕರಣ ಮಾಡಬೇಕೆನ್ನತಕ್ಕಂಥದ್ದು ಅವರ ಉದ್ದೇಶವೂ ಅಲ್ಲ, ನಾವು ಈಗ ಏನು ಪ್ರಯತ್ನ ಮಾಡುತ್ತಿದ್ದೇವೆ, ನಮ್ಮ ಉದ್ದೇಶವೂ ಕೂಡ ಅಲ್ಲ. ಒಂದು ಸಮಾಧಾನದ ವಿಚಾರ ಏನು ಎಂದು ಹೇಳಿದರೆ, ಖಾಸಗೀ ಸಹಭಾಗಿತ್ವಕ್ಕೆ

ಖಾಸಗಿಯವರ ಜೊತೆಯಲ್ಲಿ ಸೇರಿ ನಾವು ಬೆಂಗಳೂರಿನ ನೀರಿನ ಗುಣಮಟ್ಟವನ್ನು ಮತ್ತು ವಿತರಣೆಯ ವ್ಯವಸ್ಥೆಯಲ್ಲಿ ವೈಜ್ಞಾನಿಕತೆಯನ್ನು ತರಬೇಕೆನ್ನುವಂಥ ಏನು ನಮ್ಮ ಉದ್ದೇಶ ಇದೆ, ಆ ಉದ್ದೇಶದಲ್ಲಿ ನಿಮ್ಮೆಲ್ಲರ ಸಬ್‌ಮಿಷನ್ಸ್‌ನ್ನು ಈ ಚೇರ್‌ಗೆ ತಾವು ಏನು ಮಾಡಿದಿರಿ, ಅದರಲ್ಲಿ ಅನುಮೋದನೆಯನ್ನು ನಾನು ನೋಡಿದ್ದೇನೆ. ಅದುದರಿಂದ bona fides ನಿಮ್ಮದನ್ನು ನಾನು ಕ್ವೊಶ್ಚನ್ ಮಾಡುತ್ತಿಲ್ಲ. ಹಾಗೆಯೇ ನಾನು ಹೇಳುತ್ತಿರತಕ್ಕಂಥ ನಮ್ಮ bona fides ಅನ್ನೂ ನೀವು ಕ್ವೊಶ್ಚನ್ ಮಾಡಬೇಕಾದ್ದಿಲ್ಲ. ಈ ಬೆಂಗಳೂರು ವಾಟರ್ ಸಪ್ಲೈನ್ ಅಂಡ್ ಸೀವರೇಜ್ ಬೋರ್ಡ್ ಆಕ್ಟ್ ಬಗ್ಗೆ ಈಗಾಗಲೇ ನಮ್ಮ ಗೌರವಾನ್ವಿತ ಸದಸ್ಯರುಗಳು ತಮ್ಮ ಗಮನವನ್ನು ಸೆಳೆದಿದ್ದಾರೆ. ನಾನು 89ನೇ ಸೆಕ್ಷನ್‌ನ್ನು ಓದಿ ಹೇಳುವ ಮೂಲಕ ತಮ್ಮ ಗಮನವನ್ನು ಸೆಳೆಯುತ್ತೇನೆ. ಅದರಲ್ಲಿ ಈ ನೋಟಿಫಿಕೇಷನ್ ಅಥವಾ ಈ ಜಿ.ಓ. ಅಥವಾ ಈ ಒಂದು ಸ್ಟೆಪ್ ಏನಿದೆ, ನಾನು ಇದನ್ನು ಒಂದು ಸ್ಟೆಪ್ ಎಂದು ಕರೆಯುತ್ತೇನೆ. ಚಾಮಂಡಿ ಬೆಟ್ಟ ಹತ್ತುವ ಮೊದಲು ಹೇಗೆ ಒಂದು, ಎರಡು, ಮೂರು ಸ್ಟೆಪ್ಸ್ ಇರುತ್ತದೆ ಹಾಗೆಯೇ ಈ ಒಂದು ಮಹಾನ್ ಕಾರ್ಯವನ್ನು ಕೈಗೆ ತೆಗೆದುಕೊಂಡು ಅದನ್ನು ಕಾರ್ಯರೂಪಕ್ಕೆ ತರಬೇಕಾಗಿದ್ದರೆ ಹಲವಾರು ಸ್ಟೆಪ್ಸೆ ಇರುತ್ತವೆ. ಅದರಲ್ಲಿ ಒಂದು ಘಟ್ಟವನ್ನು ಮುಟ್ಟಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆ ಘಟ್ಟವನ್ನೂ ಕೂಡ ಇನ್ನೂ ಮುಟ್ಟಿಲ್ಲ. "In the discharge of its functions, the Board shall be guided by such directions on the questions of policy as may be given to it by the State Government." ಯಾರಾದರೂ ನಿಮಗೆ ಅಧಿಕಾರ ಇಲ್ಲ ಸರ್ಕಾರಕ್ಕೆ ಎಂದು ಹೇಳಿದರೆ, ಈ ಸದನ ಮಾಡಿರತಕ್ಕಂಥ the BWSSB Act of 1964, as and when amended, the Government has total powers under this Act which this August House has passed, that we can give them directions and that direction becomes binding on the BWSSB. In case of any difference of opinion, as to what is the question of policy, the decision there of the State Government shall be final. ಅಂದರೆ ಯಾರು ಇಲ್ಲಿ ಕುಳಿತು ಡೈರೆಕ್ಷನ್ಸ್ ಕೊಡುತ್ತಾರೆ, ಆ ಡೈರೆಕ್ಷನ್ಸ್‌ನ್ನು ಒಬೆ ಮಾಡುವುದಿಲ್ಲವೆಂದು ಹೇಳತಕ್ಕಂಥ ಅಧಿಕಾರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಇಲ್ಲ ಎನ್ನತಕ್ಕಂಥದ್ದು ವಿಧಿರಿಕ್ತ. ಏನು ಸುಬ್ಬರೆಡ್ಡಿರಾಯರೇ, ತಾವು ಇದಕ್ಕೆ ಏನು ಹೇಳುತ್ತೀರಿ ? I have read that Section. I want your legal advice.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪಾಪ, ಅವರು ಮೊದಲನೇ ಸಾರಿ ವಿಧಾನಸಭೆಗೆ ಬಂದಿದ್ದಾರೆ. ಏಕೆ ಅವರಿಗೆ ಟೀಸ್ ಮಾಡುತ್ತೀರಿ ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಕೌನ್ಸಿಲ್‌ನಲ್ಲಿ ಅಷೂರೆನ್ಸ್ ಕೊಟ್ಟಿದ್ದೀರಿ. ಎಲ್ಲರನ್ನೂ ಕರೆಸಿ ಆ ಮೇಲೆ ತೀರ್ಮಾನ ಮಾಡೋಣ ಎಂದು ಹೇಳಿದ್ದೀರಿ. ಅದನ್ನು ಮೊದಲು ಮಾಡಬೇಕಾಗಿರುವುದು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಶ್ರೀ ಸುಬ್ಬಾರೆಡ್ಡಿಯವರ ಅಮೆಂಡ್‌ಮೆಂಟ್ ಏನಿದೆ, ಅದು ಇದರಲ್ಲಿ ಇಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದು ಹೇಳುತ್ತೇನೆ, ಅಮೆಂಡ್‌ಮೆಂಟ್ ಮಾಡಲೇಬೇಕಾಗಿದ್ದನ್ನು ಆಲ್‌ರೆಡಿ ವಾಟರ್ ಬೋರ್ಡ್‌ನವರು ಮಾನ್ಯ ಮುಖ್ಯಮಂತ್ರಿ ಅವರಿಗೆ ಕಾಗದ ಬರೆದಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ : ಶ್ರೀ ಸುರೇಶ್‌ಕುಮಾರ್‌ರವರು ಈ ಕಂಪನಿಗಳ ವಿಚಾರವಾಗಿ ನಮ್ಮಲ್ಲೂ ಕೆಲವು ಮಾಹಿತಿಗಳು ಇದೆ ಎಂದು ಹೇಳಿದರು. ಸಂತೋಷದ ವಿಚಾರ ಏಕೆಂದರೆ ಇವೆಲ್ಲಾ ಅವರ ಬ್ಯಾಲೆನ್ಸ್ ಶೀಟ್ಸ್ ಎಲ್ಲಾ open for scruting I think, it is a public document. Websiteನಲ್ಲಿ ನಾವು ಕ್ಲಿಕ್ ಮಾಡಿದರೆ ಎಲ್ಲಾಗೊತ್ತಾಗುತ್ತದೆ. ವಿವೆಂಡಿ ಎನ್ನತಕ್ಕಂಥದ್ದು, ಯಾವ ಸಂಸ್ಥೆಯ ಜೊತೆಯಲ್ಲಿ ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ವ್ಯವಹಾರ ಮಾಡುತ್ತಾ ಇದೆ, ಅದು ಒಟ್ಟು ಇವತ್ತು 100 ದೇಶಗಳಲ್ಲಿ ಕೆಲಸ ಮಾಡುತ್ತಿದೆ. ಅದರ ಒಟ್ಟು ಟರ್ನ್ ಓವರ್ 38 ಬಿಲಿಯನ್ ಡಾಲರ್ಸ್. ಅಂದರೆ 19 ಸಾವಿರ ಕೋಟಿ ರೂಪಾಯಿಗಳು ! ಅಷ್ಟು ದೊಡ್ಡ ಕಂಪನಿ ; ಅಂದಮೇಲೆ ನಾವು ಆ ಕಂಪನಿ ಕಂಡರೆ ಭಯ ಬೀಳಬಾರದು. ಏಕೆಂದು ಹೇಳಿದರೆ ನಮ್ಮ ಸರ್ಕಾರದ ಆಯವ್ಯಯವೇ 24 ಸಾವಿರ ಕೋಟಿ ರೂಪಾಯಿಗಳು. ಒಂದೇ ಒಂದು ಕಂಪನಿ ಇನ್ನೊಂದು ಕಂಪನಿಯ ಲೆಕ್ಕ ತೆಗೆದುಕೊಳ್ಳುವುದಿಲ್ಲ. ಅವರದ್ದೂ ಸಹ ಸುಮಾರು 16 ಸಾವಿರ ಕೋಟಿ ರೂಪಾಯಿಗಳು. so, 19 plus 16 ಸುಮಾರು ಒಟ್ಟು 38, 39 ಅಥವಾ 40 ಸಾವಿರ ಕೋಟಿ ರೂಪಾಯಿಗಳ ವಹಿವಾಟನ್ನು ನಡೆಸುತ್ತಿರತಕ್ಕಂಥ ಜವಾಬ್ದಾರಿಯುತವಾದಂಥ ಕಂಪನಿಗಳು ಅನ್ನತಕ್ಕಂಥದ್ದನ್ನು ಈ ಸದನದ ಗಮನಕ್ಕೆ ತರಲಿಕ್ಕೆ ಸೀಮಿತವಾಗಿ ಈ ಮಾಹಿತಿಯನ್ನು ತಮಗೆ ಕೊಡುತ್ತಿದ್ದೇನೆ. ಶ್ರೀ ಸುರೇಶ್ ಕುಮಾರ್ ಅವರು ಏನು ಮಾಹಿತಿ ಕೊಡಬೇಕೆಂದಿದ್ದಾರೋ ಅದನ್ನು ಇಲ್ಲಿಯೂ ಹೇಳಬಹುದು ಅಥವಾ ನಾನು ತಮ್ಮನ್ನು ಕರೆದಾಗ ತಾವು ಕೊಡಬಹುದು. ನಿಜ state holders-Elected representatives of Bangalor City.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈಗ ಕಂಪನಿಗಳ ಬ್ಯಾಲೆನ್ಸ್‌ಶೀಟ್‌ನ್ನು ವೆಬ್‌ಸೈಟ್‌ನಲ್ಲಿ ನೋಡಿದ ತಕ್ಷಣವೇ 35 ಕೋಟಿ ಬಿಲಿಯನ್‌ನಷ್ಟು ಅವರು ಟರ್ನ್‌ಓವರ್ ಇದೆ ಎನ್ನತಕ್ಕಂದ್ದು ಗೊತ್ತಾಗುತ್ತದೆ ಎಂಬ ಮಾತನ್ನು ಹೇಳಿದಿರಿ. ಬೆಂಗಳೂರು ಸಿಟಿಯಲ್ಲಿ ಇಎಲ್‌ಆರ್‌ಟಿಎಸ್ ತರಬೇಕೆಂದು ಬಹಳಷ್ಟು ಎಂಓಯುಗಳು ನಮ್ಮ ಸಾರ್ಕರದಲ್ಲಿಯೂ ಆಯಿತು, ನಿಮ್ಮ ಸರ್ಕಾರದಲ್ಲಿಯೂ ಆಯಿತು. 300 ಕೋಟಿ ರೂಪಾಯಿಗಳ ಸೆಸ್ ಅನ್ನೂ ಕಲೆಕ್ಟ್ ಮಾಡುತ್ತಿದ್ದೇವೆ. ಅದರಲ್ಲಿ 50-60 ಸಾವಿರ ಕೋಟಿ ರೂಪಾಯಿಗಳ ಟರ್ನ್-ಓವರ್ ಮಾಡಿದ ಕಂಪನಿಗಳು ಯಾವುವೂ ಮುಂದೆ ಬಂದಿಲ್ಲ. ಇಎಲ್‌ಆರ್‌ಟಿಎಸ್, ಆಕಾಶದಲ್ಲಿ ಇಮ್ಯಾಜಿನ್ ಮಾಡಿಕೊಳ್ಳುವ ಗೊಂಬೆಯಾಗಿದೆಯೇ ಹೊರತು ಇದುವರೆಗೂ ಬಂದಿಲ್ಲ. ನಮ್ಮ ಹತ್ತಿರವಿರುವ ಮಾಹಿತಿ ಏನಿದೆ ಅದನ್ನು ತಾವು ಪರಿಶೀಲಿಸಬೇಕೆಂದು ನಾವು ಒತ್ತಾಯಿಸುತ್ತಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಸ್ವಲ್ಪ ಅನುಮಾನ ಬರಲು ಕಾರಣವೇನೆಂದರೆ, ಅವರ ಎರಡು ಕಂಪನಿಗಳಿವೆ. Vivendi-Universal ಎಂದು ಹೇಳಿ ಅದೊಂದು Media Entertainment Company ಎಂಬುದು. ಇನ್ನೊಂದು, Vivendi Environment Water Energy ಇದಕ್ಕೆ ಸೀಮಿತವಾಗಿದೆ. ನಾವು ನೆಗೋಷಿಯೇಟ್

ಮಾಡುತ್ತಿರತಕ್ಕಂಥದ್ದು, Vivendi Environment, not Vivendi Universal, Media and Entertainment Company but any way. ಹೆಚ್ಚು ದಾಖಲೆಗಳನ್ನು ನಾನು ತಮಗೆ ತೋರಿಸುತ್ತೇನೆ. ನಿಮಗೆ ಅನುಮಾನ ಏನು ಬಂತು ? ಏಕೆ ಬರುತ್ತಿದೆ ಎಂಬುದು ನನಗರ್ಥವಾಗುತ್ತಿಲ್ಲ. ನಾವು ಕೆಲಸ ಶುರು ಮಾಡಿದ್ದೇವೆಯೇ ? ಅದಕ್ಕೆ ಮಂತ್ರಿಮಂಡಲ ಪರವಾನಗಿ ಕೊಟ್ಟಿದೆಯೇ ? ಏನೂ ಇಲ್ಲ. ಇವೊತ್ತು ಪರವಾನಗಿ ಕೊಟ್ಟಿರತಕ್ಕಂಥದ್ದು, ಎಷ್ಟು ವೆಚ್ಚವಾಗಬಹುದು ಎನ್ನುವುದಕ್ಕಾಗಿ ಒಂದು ಸ್ಪಡಿ ಮಾಡಿ ಹೇಳಿ, ಎಂದು ಅವರ ಜೊತೆಯಲ್ಲಿ ನಾವು ವ್ಯವಹಾರ ಮುಂದುವರೆಸುತ್ತೇವೆಯೋ ಅಥವಾ ನಿಮ್ಮ ಕೈಯಲ್ಲಿ ಆಗುವುದಿಲ್ಲವೆ ಅಥವಾ ನಾವು ಇದನ್ನು ಭರಿಸುವ ಶಕ್ತಿ ಬೆಂಗಳೂರಿನ ಜನರಿಗಿಲ್ಲ, ರಾಜ್ಯ ಸರ್ಕಾರಕ್ಕಿಲ್ಲ, ಅದರಿಂದ ನಾವು ಈ ಸಬ್ಸಿಡೈಸ್ಡ್ ವಾಟರ್ ಸಿಸ್ಟಂ ಅನ್ನು ಮುಂದುವರೆಸಿಕೊಂಡು ಹೋಗುತ್ತೇವೆಂದು ಹೇಳುವ ತೀರ್ಮಾನವನ್ನು ಕೂಡ ನಾವೇ ಮಾಡಿಕೊಳ್ಳಬಹುದು. ಆದುದರಿಂದ, ನಾವು ಹಾರ್ಡ್ ಪೊಜಿಷನ್‌ಗೆ ಸ್ಟಿಕ್-ಆನ್ ಆಗಬೇಕಾಗಿಲ್ಲ. ನಮಗೆ ಮುಕ್ತವಾದಂಥ ಮನಸ್ಸಿದೆ. ಅತೀ ಶೀಘ್ರದಲ್ಲಿ ತಮ್ಮೆಲ್ಲರನ್ನೂ ಕರೆದು, ಈ ಎಲ್ಲಾ ವಿಚಾರಗಳನ್ನೂ ತಮ್ಮ ಮುಂದಿಡುತ್ತೇನೆ. ಅಲ್ಲಿಯವರೆವಿಗೆ ಈ ವಿಚಾರದಲ್ಲಿ ನಾವು ಯಾವ ಹೊಸ ಹೆಜ್ಜೆಯನ್ನೂ ಹಾಕುವುದಿಲ್ಲ ಎನ್ನುವ ಸ್ಪಷ್ಟವಾದ ಭರವಸೆಯನ್ನು ನಾನು ಮಾನ್ಯ ಸಿಂಧ್ಯಾರವರಿಗೆ ಕೊಡುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳು ಕೇಳಿದ್ದಾರೆ. I would like to bring to the notice of the Chief Minister....

MR. SPEAKER : Samething has been shown... ನಿನ್ನೆ ಎಲ್ಲಾ ಹೇಳಿದ್ದಾರಲ್ಲಾ. ಪತ್ರಿಕೆಗಳಲ್ಲಿ ಬಂದಿರಬಹುದು.

ಶ್ರೀ ಎಸ್. ಸುರೇಶ್‌ಕುಮಾರ್ : ಮುಖ್ಯಮಂತ್ರಿಗಳು ....

SRI D.B. CHANDREGOWDA (MINISTER FOR LAW & PARLIAMENTARY AFFIARS) : If all the discussions were to take place on the floor of the House, where is the need to call the opposition for discussion ?

ಶ್ರೀ ಎಸ್. ಸುರೇಶ್‌ಕುಮಾರ್ : ಮುಖ್ಯಮಂತ್ರಿಗಳು ಅಂಡರ್‌ಲೈನ್ ಮಾಡಿ ನನಗೆ ಹೇಳಿದ್ದಾರೆ. ಸುರೇಶ್ ಕುಮಾರ್‌ರವರು ಇಲ್ಲಿ ಬೇಕಾದರೂ ಹೇಳಬಹುದು ಅಥವಾ ಸಭೆ ಕರೆದಾಗ ಅಲ್ಲೂ ಹೇಳಬಹುದು ಎಂದು. I would lik to read : "Vivend's stock has plunged. Debt has soared and Workers want CEO Jean Mary Mazier's "This is the Headline.. Judging from the charger, Vivendi Universal Chairman and CEO Jean Mary Maziers is headed for the guillotine. He is being ousted by his French directors who are planning to break up the company. Throughout his days. Witnessed a whisper of possible bankruptcy or atleast a major liquidity crises. The drumbeat of gossip some of which may be put at rest at Vivendi's May 29th board meeting at New York city speaks to the miss messier has made... ಅವರು ಹೇಳುತ್ತಾರೆ ಸಾರ್, The emperor is down to his bikini underpants".

ಎಂದು ಹೇಳುತ್ತಾರೆ. ಅದರ ಮುಂದೆ ತಾವು ಹೇಳಿದ ಪ್ರಶ್ನೆಗೆ ನಾನು ಬರುತ್ತೇನೆ, "This flambuyont 45 year old Vivendi Universal worse than to the global scene two years ago.... after transforming a 148 year old French water company into a media and entertainment coglomerate by paying 34 billion dollars for seagraph, the liquor and entertainment company owned by Brafman family. ನಾನು ಹೇಳುತ್ತಿರುವುದು ಎಷ್ಟು ನಿಜವೋ, ಎಷ್ಟೋ ದೇಶಗಳಲ್ಲಿದೆ, ಎಷ್ಟೋ ಬಿಲಿಯನ್ ಇದೆ ಎಂದು ನೀವು ಹೇಳುತ್ತಿದ್ದೀರಿ, ಅದೆಷ್ಟು ನಿಜವೋ, ನಾನು ಹೇಳುತ್ತಿರುವುದೂ ಅಷ್ಟೇ ನಿಜ. ಅದೇ ವಾಟರ್ ಕಂಪನಿಯನ್ನು ಅವರು ಟ್ರಾನ್ಸ್‌ಫರ್ ಮಾಡಿ, this 148 years old French water company was transformed into a media and entertainment conglomerate ಎಂಬುದು ನನ್ನ ಹತ್ತಿರವಿರುವ ಮಾಹಿತಿ. ಇನ್ನೂ ಸಾಕಷ್ಟು ಮಾಹಿತಿ ಕೊಡುತ್ತೇನೆ. ವಿವೆಂಡಿದವನು ನನಗೆ ಏನೂ ಕಾಂಪಿಟೇಟರ್ ಅಲ್ಲ ಅಥವಾ ನಾನೇನೂ ಅದರ ವಿರುದ್ಧ ಕಂಪನಿಯ ಸ್ಪೋಕ್ಸ್ ಪರ್ಸನ್ ಕೂಡ ಅಲ್ಲ. ತಾವೇನು ಸ್ಟೇಕ್-ಹೋಲ್ಡರ್ಸ್ ಎಂದು ಹೇಳಿದಿರಿ, ಬೆಂಗಳೂರು ರೆಪ್ರೆಸೆಂಟಿಟೀವ್ ಅಷ್ಟೇ ಅಲ್ಲ, ನಾವು I will go to the extent of saying that Bangalore citizen they are the stakeholders. ಅವರ ದೃಷ್ಟಿಯಿಂದ ನಾವು, ನೀವು ಯೋಚನೆ ಮಾಡಬೇಕು. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇನ್ನೂ ಮಾಹಿತಿಗಳನ್ನು ನಾವು ಒದಗಿಸುತ್ತೇವೆ. ಸಾಕಷ್ಟು ಈ ಸದನದಲ್ಲಿ ಹೇಳಲಿಕ್ಕಾಗುವುದಿಲ್ಲ. otherthan limitations, time ದೂ ಇರುತ್ತದೆ, words ದೂ ಇರುತ್ತದೆ, ಅದಕ್ಕೋಸ್ಕರ ಇದನ್ನು ಖಂಡಿತವಾಗಿ ಹೇಳುತ್ತೇನೆ. question of bonafies ಎನ್ನುವುದಕ್ಕಿಂತ ಆತಂಕ ಬೋನಾಫೈಡ್ಸ್‌ಗಿಂತ ಆತಂಕ. ಉದಾ : ನೀವು ಹೇಳಿದ್ದೀರಿ, ನಾವು ಬಿಡಬ್ಲ್ಯುಎಸ್‌ಎಸ್‌ಬಿ ಏನೇ ಹೇಳಿದರೂ ಕೂಡ ಕೇಳಲೇಬೇಕೆಂದು ಹೇಳಿದಿರಿ. ಆಕ್ಟ್‌ನಲ್ಲಿ ರೆಸಿಡ್ಯುಯರಿ ಪವರ್ಸ್ ಎಂದು ಇರುತ್ತದೆ. ನಿಮ್ಮನ್ನು ಒಪ್ಪಿಸಬೇಕು, ನಿಮ್ಮನ್ನು ಮೆಚ್ಚಿಸಬೇಕು, ನೀವು ಹಾಡುವ ಒಂದು ತಾಳಕ್ಕೆ ಡ್ಯಾನ್ಸ್ ಮಾಡಬೇಕೆನ್ನುವುದಕ್ಕೋಸ್ಕರ ಬಿಡಬ್ಲ್ಯುಎಸ್‌ಎಸ್‌ಬಿ ಎಷ್ಟು ಆಘಾತಕಾರಿ ಕೆಲಸ ಮಾಡಿದೆ ಎಂದರೆ, 2001-02ನೇ ಸಾಲಿನ 3 ತಿಂಗಳ ಹಿಂದಿನ ಫಿಗರ್ಸ್ ನನ್ನ ಹತ್ತಿರವಿದೆ, ಅವರಿಗೆ ಒಟ್ಟು ಇನ್‌ಕಂ ಇದ್ದದ್ದು 267.84 ಕೋಟಿ ರೂಪಾಯಿಗಳಾದರೆ, ಒಟ್ಟು ಖರ್ಚು ಇದ್ದದ್ದು, 255.98 ಕೋಟಿ ರೂಪಾಯಿಗಳು. 11.86 ಕೋಟಿ ರೂಪಾಯಿಗಳ ಸರ್‌ಪ್ಲಸ್ ಇತ್ತು. we can call it profit or supplus, ಆದರೆ, ಇದು ಬಂದರೆ ಮುಂದೆ ತಾವು ನಾವು ಹೇಳಿದ ಹಾಗೆ ಬಿಡಬ್ಲ್ಯುಎಸ್‌ಎಸ್‌ಬಿಯವರು ಕೇಳಬೇಕೆಂದು, ಹೇಳಬೇಕು ಎಂದು, ಅದಕ್ಕೆ ತೊಂದರೆಯಾಗುತ್ತಿದೆಂದು ಏನು ಮಾಡಬಹುದು ಎಂಬುದನ್ನು ಹೇಳುತ್ತೇನೆ. ನೀವು ಹೇಳಿದ ಹಾಗೆ ಕೇಳದಿದ್ದರಿಂದ ಚೇರ್ಮನ ಶ್ರೀ ಸಂಜಯ್ ಕೌಲ್ ಹೋದರು, ಆಮೇಲೆ ಉಷಾ ಗಣೇಶ ಹೋದರು. That is a administrative policy. ಕ್ಯಾಪಾಸಿಟಿ ಇದೆ ನೀವು ಮಾಡುತ್ತಾ ಹೋಗಬಹುದು. ಆದರೆ, ಅದಕ್ಕೋಸ್ಕರ 11.86 ಕೋಟಿ ರೂಪಾಯಿಗಳ ಸರ್‌ಪ್ಲಸ್, ಪ್ರಾಫಿಟ್ ಇದ್ದಿದ್ದ ಕಡೆ ಅದನ್ನು ತೆಗೆಸಿ ಹಾಕಿ, ಮ್ಯಾನೇಜ್ ಮಾಡಿ, 2.50 ಕೋಟಿ ರೂಪಾಯಿಗಳ ಡಿಫಿಸಿಟ್, ಲಾಸ್ ಎಂದು ತೋರಿಸುವ ಮಟ್ಟಿಗೆ ಬಿಡಬ್ಲ್ಯುಎಸ್‌ಎಸ್‌ಬಿ ಬಂದರೆ, ಪ್ರೈವೇಟೈಜೇಷನ್‌ಗೋಸ್ಕರ ನಾವು ಸರ್ಕಾರವನ್ನು ಮೆಚ್ಚಿಸಬೇಕು, ಸರ್ಕಾರ ಹೇಳಿದ ಹಾಗೆ ಕೇಳಬೇಕು ಇಲ್ಲದಿದ್ದರೆ ರೆಸಿಡ್ಯುಯರಿ ಪವರ್ಸ್ ಉಪಯೋಗಿಸುತ್ತಾರೆ

ಎಂಬ ಭಯದಿಂದ, ಆತಂಕದಿಂದ ಬಂದರೆ ಏನಾಗುತ್ತದೆ ? ನಿಮಗೆ ಸತ್ಯ ಗೊತ್ತಾಗಬೇಕು. It may be bitter, ಗೊತ್ತಾಗಬೇಕು. ಅದಕ್ಕೋಸ್ಕರ ಹೇಳುತ್ತಿದ್ದೇನೆ, ಇನ್ನೂ ಸಾಕಷ್ಟು ಮಾಹಿತಿಯನ್ನು ತಮಗೆ ಸಲ್ಲಿಸುತ್ತೇನೆ. ನಾವು, ನಮ್ಮ ಸ್ನೇಹಿತರು ಸಲ್ಲಿಸುತ್ತಾರೆ. ಆ ಸಭೆಯಲ್ಲಿ ಹೇಳುತ್ತಾರೆ. ಅದಕ್ಕೋಸ್ಕರ ನಮ್ಮ ಪ್ರೆಸ್ಟೀಜ್ ಏನಿಲ್ಲ, ಆತಂಕದಿಂದ ಹೇಳುತ್ತಿದ್ದೇವೆ. ತಮ್ಮ ಒಂದು ಬೋನಾಫೈಡ್ ಇಲ್ಲಿ ಗೊತ್ತಾಗುತ್ತದೆ. ಇವರೇನೋ ಹೇಳುತ್ತಿದ್ದಾರೆ. ಅದರಲ್ಲಿ ಸತ್ಯವಿರಬಹುದು, ಯಾವುದೋ ಅಲ್ಟೀರಿಯರ್ ಮೋಟೀವ್‌ನಿಂದ ಹೇಳುತ್ತಿದ್ದಾರೆಂದು ನಮ್ಮ ಬಗ್ಗೆ ಅನ್ನಿಸಿದರೆ ಅದನ್ನು ಅಬೆಯನ್ಸ್‌ನಲ್ಲಿಟ್ಟು, ಮೀಟಿಂಗ್ ಕರೆಯುವವರೆಗೆ ಏನೂ ಆಗುವುದಿಲ್ಲ, ನೀವು ಹೇಳಿದ ಹಾಗೆ ಫಸ್ಟ್ ಸ್ಟೆಪ್ ಕೆಲವರು ಚಾಮುಂಡಿಬೆಟ್ಟಕ್ಕೆ ಕಾರಿನಲ್ಲಿಯೇ ಹೋಗುತ್ತಾರೆ, ಅದು ಫಸ್ಟ್ ಸ್ಟೆಪ್ ನಂತರ ಸೆಕೆಂಡರ್ ಸ್ಟೆಪ್ ಎಂದು ಇರುತ್ತದೆ. ಅದಕ್ಕೋಸ್ಕರ, just keep it in abeyance. 8ನೇ ತಾರೀಖು ಸಭೆ ಕರೆದ ತಕ್ಷಣ ನಾವು ಮಾತನಾಡುತ್ತೇವೆ. ಒಪ್ಪಿದರೆ ಒಪ್ಪಿ, ಇಲ್ಲವೇ ಬಿಡಿ. please go ahead then.

ಶ್ರೀ ಎಸ್.ಎಂ. ಕೃಷ್ಣ : ಸದನಕ್ಕೆ ನಾನೇನು ನಿವೇದಿಸಬೇಕೆಂದಿದ್ದೆ, ಅದನ್ನು ನಾನು ಹೇಳಿ ಮುಗಿಸಿದ್ದೇನೆ.

ಅಧ್ಯಕ್ಷರು : ಈ ವಿಷಯವನ್ನು ಇಲ್ಲಿಗೆ ಸಾಕು ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಚರ್ಚೆಗೆ ಕರೆಯುತ್ತೇವೆ, ಅಲ್ಲಿಯವರೆಗೆ ಮುಂದಿನ ಸ್ಟೆಪ್ಸ್ ತೆಗೆದುಕೊಳ್ಳುವುದಿಲ್ಲವೆಂದಿದ್ದಾರೆ. ಆ ರೀತಿ ಕರೆದು ಮಾತನಾಡಲಿ. ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು : ಸದನ ಶುರುವಾಗಿ ಸುಮಾರು 24 ದಿವಸಗಳಾಯಿತು. ಅದರಲ್ಲಿ 20 ದಿವಸಗಳು ನಾನ್-ಅಫಿಷಿಯಲ್ ಬಿಸಿನೆಸ್ ನಡೆದಿದೆ. ಇವತ್ತು ಅರ್ಧ ಗಂಟೆಯೊಳಗೆ ಕೆಲವು ಸಿಂಗಲ್ ಬಿಲ್ಸ್ ಇವೆ, ಅದನ್ನು ಒಂದು ಅಥವಾ ಎರಡನ್ನಾದರೂ ಮಾಡೋಣ. ಚಂದ್ರೇಗೌಡರೆ, ಯಾವುದು ಅರ್ಜೆಂಟ್ ಆರ್ಡಿನೆನ್ಸ್ ರೀಪ್ಲೇಸ್ ಮಾಡುವ ಬಿಲ್ಸ್ ಇವೆ ?

ಶ್ರೀ ಡಿ.ಬಿ. ಚಂದ್ರೇಗೌಡ : ಮೇಲ್ಮನೆಯಲ್ಲಿ ಮಂಜೂರಾಗಿ ಬಂದ, ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ವಿಧೇಯಕ, 2002ದ ಮೇಲೆ ಹೆಚ್ಚು ಕಡಿಮೆ ಅರ್ಧ ಗಂಟೆ ಚರ್ಚೆಯಾಗಿದೆ, ಕ್ಲಾರಿಫಿಕೇಷನ್ ಕೂಡ ಮಾಡಿದ್ದೇವೆ. ಆ ಬಿಲ್ ಅನ್ನು ಪಾಸ್ ಮಾಡಬಹುದು. ಏನಾದರೂ ಅಶ್ಯೂರೆನ್ಸ್ ಬೇಕಾದರೆ ಕೇಳಬಹುದು.

MR. SPEAKER : We will take up financial business. ಮಾನ್ಯ ಫೋರ್ಪಡೆಯವರೇ ಬಿಲ್ ಇಂಟ್ರಡ್ಯೂಸ್ ಮಾಡಿ.

2. ಶಾಸನ ರಚನೆ

ಅ) ವಿಧೇಯಕ ಮಂಡನೆ

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2002

ಶ್ರೀ ಎಂ.ವೈ. ಫೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2002 ಅನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."